this Government, when it came into power, gave for the first time careful thought to their problems. As a result, the Government have announced several concessions to the farmers. Their long standing demand for abolition of the Betterment Levy was fulfilled and the Betterment levy was abolished. The Orders were issued accordingly in December 1980. Several doubts have however been raised by several Members regarding implementation of the Order. The Government would further examine this question and issue suitable clarification Pending issue of such clarification, the collection of the arrears of Betterment Levy will be temporarily stayed.

I would like to take this opportunity to state that this Government have given foremost consideration to the farmers and would continue to do so. It should, however, be realised that the problems of the farmers which are the legacy of the past, cannot be solved overnight. A constant and systematic effort will have to be made for some time keeping the financial constraints in view. The well-to-do farmers will have also to come forward to help the Government to solve to problems of the Community at large. There should, therefore, no objection to pay back the legitimate dues to the Government. Keeping this in view, Government have issued strict instructions to recover the Government dues such Co-operative Land Revenue and water rate etc. While all legal steps will be taken to recover the dues from the well-to-do and will ful defaulters, it would be ensured that no harassment is caused to poor farmers.

ಸಿಂಡಿನೇ ನಿಯಮದ ಮೇರೆಗಿನ ವಿಷಯ :
ಕನಿಷ್ಠ ವೇತನ ನಿಗದಿ ಮಾಡುವ ಬಗ್ಗೆ

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ನಿಯಮ ೩೦೨ರ ಪ್ರಕಾರ ನನ್ನ ರಾಜ್ಯದಲ್ಲಿ ಕನಿಷ್ಠ ವೇತನ ನಿಗದಿ ಮಾಡುವ ಬಗ್ಗೆ ಸರ್ಕಾರ ವಹಿಸಿರುವ ನೀತಿಯ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ. ಇದರಲ್ಲಿ ಎರಡು ಭಾಗವಾಗಿ ಈ ಪ್ರಶ್ನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಮೊದಲನೆಯದಾಗಿ ಬೀಡಿ ಕೈಗಾರಿಕೆಯಲ್ಲಿ ಕನಿಷ್ಠ ವೇತನ ನಿಗದಿ ಮಾಡುವುದಗಷ್ಟೆ ವಿಳಂಬ ಅಮ್ಮಪಹಾರ ಮತ್ತು ಇನ್ನೂ ಏನೇನು ನಡೆದಿದೆ ಎಂಬ ಬಗ್ಗೆ ಗಹನವಾಗಿ ತನಿಖೆ ನಡೆಸಬೇಕೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಇನ್ನೂ ೨೬ ಕಾರ್ಖಾನೆಗಳ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಮಾಡುವ ಬಗ್ಗೆ ನೋಟಿಫಿಕೇಷನ್ ಹೊರಡಿಸಿದ್ದಾರೆ. ಆದರಲ್ಲಿ ೧೬ ಕೈಗಾರಿಕೆಗಳ ನೋಟಿಫಿಕೇಷನ್‌ಗಳನ್ನು ಬೋರ್ಡ್‌ನಲ್ಲಿ ಬಹುಮತದಿಂದ ಅಂಗೀಕಾರ ಮಾಡಿ ಗೆಜೆಟ್ ನೋಟಿಫಿಕೇಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇದನ್ನು ನಾನು ಪ್ರತ್ಯೇಕವಾಗಿ ಪ್ರಸ್ತಾಪ ಮಾಡಬೇಕಾಗಿದೆ.

ಮೊದಲು ಬೀಡಿ ಕೈಗಾರಿಕೆಯಲ್ಲಿ ೧೯೭೯ರಲ್ಲಿ ಕನಿಷ್ಠ ವೇತನವನ್ನು ನಿಗದಿ ಮಾಡಲಾಗಿತ್ತು. ಪುನಃ ೨೪-೪-೧೯೮೧ರಲ್ಲಿ ನಿಗದಿ ಮಾಡುವುದಕ್ಕೆ ಡ್ರಾಫ್ಟ್ ನೋಟಿಫಿಕೇಷನ್ ಬಂತು. ಇದಕ್ಕೆ ಇರುವುದು ಕೇವಲ ೨ ತಿಂಗಳು ಮಾತ್ರ ವಾಯಿದೆ. ಕಾರ್ಮಿಕರಾಗಲಿ, ಮಾಲೀಕರಾಗಲಿ, ತಮ್ಮ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅದನ್ನು ತಿಳಿಸುವುದಕ್ಕೆ ೨ ತಿಂಗಳ ಅವಧಿ ಇದೆ. ಹಾಗೆ ಕೊಟ್ಟಮೇಲೆ ಎಲ್ಲ ಕಡೆ

ಯಿಂದಲೂ ಇದಕ್ಕೆ ಬೇಕಾದ ಮಾಹಿತಿಗಳು ಬಂದಿದ್ದರೂ ಮಾನ್ಯ ಮಂತ್ರಿಯವರು ಇದರ ಬಗ್ಗೆ ಅಂತಿಮವಾಗಿ ನೋಟಿಫಿಕೇಷನ್ ಹೊರಡಿಸುವುದಕ್ಕೆ ಬೋರ್ಡ್ ಮಿಾಟಿಂಗ್‌ನ್ನು ಕರೆದಿಲ್ಲ. ತಾ॥ ೧೦-೮-೮೧ಕ್ಕೆ ಬೋರ್ಡ್ ಮಿಾಟಿಂಗ್ ಕರೆದರು, ತಮ್ಮ ಇಲಾಖೆಯವರು ಡ್ರಾಫ್ಟ್ ನೋಟಿಫಿಕೇಷನ್‌ನಲ್ಲಿ ಕೊಟ್ಟಿರತಕ್ಕ ಎಲ್ಲ ಅಂಶಗಳೂ ನ್ಯಾಯವಾಗಿವೆ. ಕಾರ್ಮಿಕರು ಹೆಚ್ಚಿಗೆ ಕೇಳಿ ಆಕ್ಷೇಪ ಸಲ್ಲಿಸಿದ್ದಾರೆ. ಆದನ್ನು ಕೈಗಾರಿಕಾ ದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ ಕೊಡುವುದಕ್ಕಾಗುವುದಿಲ್ಲ ಎಂತಲೂ ಹೇಳಿದ್ದಾರೆ. ಮಾಲೀಕರು ಏನು ಆಕ್ಷೇಪಗಳನ್ನು ಎತ್ತಿದ್ದಾರೆ ಅದು ಸಾಧುವಾದುದಲ್ಲ, ಕನಿಷ್ಠ ವೇತನ ಕಾಯಿದೆಯ ಪ್ರಕಾರ ಎಂದರೆ ನಮ್ಮ ನೋಟಿಫಿಕೇಷನ್‌ನಲ್ಲಿ ಹೇಳಿರುವುದಕ್ಕಿಂತ ಹೆಚ್ಚಿಗೆ ಕೊಡಬೇಕಾಗುತ್ತದೆ. ಆದೂ ಕೂಡ ನ್ಯಾಯವಾದುದಲ್ಲ ಎಂದು ಕಾರಣಗಳನ್ನು ಕೊಟ್ಟು ನೋಟಿಫಿಕೇಷನ್‌ನಲ್ಲಿರತಕ್ಕ ಅಂಶಗಳನ್ನು ನ್ಯಾಯೀಕರಿಸಿ ಒಂದು ವರದಿಯನ್ನು ಕಾರ್ಮಿಕ ಇಲಾಖೆಯವರು ಬೋರ್ಡ್‌ಗೆ ಸಲ್ಲಿಸಿದ್ದಾರೆ. ಅದು ಏನೆಂದರೆ ೧೯೭೯ರ ಫೆಬ್ರವರಿಯಲ್ಲಿ ಜೀವನ ಸೂಚ್ಯಂಕ ೩೪೦ ಇದ್ದರೆ, ೧೯೮೧ನೇ ಮೇ ತಿಂಗಳಲ್ಲಿ ಜೀವನ ಸೂಚ್ಯಂಕ ೪೭೩ಕ್ಕೆ ಏರಿದೆ. ಅಂದರೆ ಸರಾಸರಿ ೪೦ ಪರ್ಸೆಂಟ್ ಏರಿಕೆ ಆದಂತಾಯಿತು. ೧೯೭೯ರಲ್ಲಿ ಅವರ ದಿನಗೂಲಿ ಏನಿತ್ತು ಅದಕ್ಕೆ ೪೦ ಪರ್ಸೆಂಟ್‌ನ್ನು ಸೇರಿಸಿ ೮.೧೦ ಪೈಸೆ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೆವೆ. ಇದು ನ್ಯಾಯವಾದ್ದು ಎಂದು ಅವರೇ ಹೇಳಿದ್ದಾರೆ. ಆದರೆ ರೂ. ೮.೧೦ ಪೈಸೆಯನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಏಕೆಂದರೆ ಕೇಂದ್ರ ಸರ್ಕಾರದ ಮಿನಿಮಂ ವೇಜಸ್ ಕಮಿಟಿಯವರು ಮತ್ತು ಕೇಂದ್ರ ಸರ್ಕಾರದವರೂ ಕರೆದಂಥ ಕಾರ್ಮಿಕರ ತ್ರಿಪಕ್ಷೀಯ ಸಮ್ಮೇಳನದಲ್ಲಿ ಕಾರ್ಮಿಕರು, ಮಾಲೀಕರು ಮತ್ತು ಸರ್ಕಾರದ ಪ್ರತಿನಿಧಿಗಳು ಇದ್ದಂಥ ಮಿಾಟಿಂಗ್‌ನಲ್ಲಿ ನಿಗದಿಯಾದಂಥ ಅಂಶಗಳ ಆಧಾರದ ಪ್ರಕಾರ ಇವತ್ತು ಕಾರ್ಮಿಕರಿಗೆ ೧೨ ರೂ. ಬರಬೇಕಾಗಿತ್ತದೆ. ನಾನು ಹಾಜರಿದ್ದ ಸಭೆಯಲ್ಲಿ ೯.೪೦ ರೂ ಕೊಡಬೇಕೆಂದು ಸರ್ಕಾರದ ಅಧಿಕಾರಿಗಳು ಹೇಳಿದ್ದನ್ನು ಮಾಲೀಕರು ಮೊದಲು ಒಪ್ಪಿಕೊಂಡರು. ಆನಂತರ ಕಾರ್ಮಿಕ ಮಂತ್ರಿಯವರು ಬೆಳಗಾಂನಲ್ಲಿ ಭಾಷಣ ಮಾಡುತ್ತಾ ರೂ. ೯.೪೦ ಪೈ. ಅಷ್ಟು ಬೇಗ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು ಅನಂತರ ಇಲ್ಲಿಗೆ ಬಂದಮೇಲೆ ಸಭೆಯನ್ನು ಕರೆಯಲಿಲ್ಲ. ಡ್ರಾಫ್ಟ್ ನೋಟಿಫಿಕೇಷನ್‌ನಲ್ಲಿ ಹೇಳಿದ್ದಂಥ ರೂ. ೮.೧೦ ಮತ್ತು ವೇರಿಯಬಲ್ ಡಿ.ಎ ಮಿನಿಮಂ ವೇಜಸ್‌ನ ೪ನೇ ಸೆಕ್ಷನ್ ಪ್ರಕಾರ ಕೊಡುವುದಕ್ಕೆ ತಮಗೆ ಅಧಿಕಾರವಿದೆ. ೧೫ ಪಾಯಿಂಟ್‌ನಷ್ಟು ಬೆಲೆ ಏರಿಕೆಯಾದರೆ ೫೫ ಪೈಸೆ ತುಟ್ಟಿಭತ್ಯ ಕೊಡಬೇಕೆಂದು ಡ್ರಾಫ್ಟ್ ನೋಟಿಫಿಕೇಷನ್‌ನಲ್ಲಿತ್ತು. ಅದನ್ನು ಬೋರ್ಡ್‌ನಲ್ಲಿ ಅಂಗೀಕಾರ ಮಾಡಿದರು. ಆಗ ಮಂತ್ರಿಗಳು ಸರ್ಕಾರದ ಪರವಾಗಿ ಮಾತ ಕೊಡಬೇಕಾಗಿತ್ತು. ನಿಮ್ಮ ಅಧ್ಯಕ್ಷತೆಯಲ್ಲಿ ಸಭೆ ನಡೆದಾಗ, ನಿಮ್ಮ ಇಲಾಖೆಯವರೇ ವಿಚಾರವನ್ನು ತಿಳಿಸಿದಾಗ ತಾವು ಮೂಕ ಪಶುವಿನಂತೆ ಏತಕ್ಕೆ ಕೂತುಕೊಂಡಿದ್ದೀರಿ? ಅಂತಿಮವಾಗಿ ತೀರ್ಮಾನವಾಗುವ ಸಂದರ್ಭದಲ್ಲಿ ನಾನು ಎರಡೂ ಕಡೆಗೂ ಇಲ್ಲವೆಂದು ನಮ್ಮನ್ನಿರುವುದು ಸರಿಯಲ್ಲ. ಯಾವ ಆಧಾರದಮೇಲೆ ನೀವು ರೂ. ೭.೪೦ ಪೈಸೆ ಎಂದು ನಿಗದಿ ಮಾಡಿದಿರಿ? ಬೆಲೆ ಏರಿಕೆಗೆ ಅನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಮೊದಲನೇ ಸಾರಿ ತುಟ್ಟಿಭತ್ಯವನ್ನು ಕೊಡುವ ವಿಚಾರವನ್ನು ಈ ಎಲ್ಲಾ ಕಾರ್ಮಿಕ ಸಂಘಗಳೂ ಮತ್ತು ನಾವು ತಮಗೆ ಅಭಿನಂದನೆಗಳನ್ನು ಸಲ್ಲಿಸಿದೆವು. ಆದರೆ ಇವತ್ತು ಕೊಟ್ಟಿಂಥ ಅಭಿನಂದನೆಗಳನ್ನು ನಾವು ಈಗ ವಾಪಸ್ಸು ತೆಗೆದುಕೊಳ್ಳಬೇಕಾಗಿದೆ. ನಾವು ತಮಗೆ ಕೊಟ್ಟ ಮಾನವಿಯ ಮೊದಲನೇ ಪ್ಯಾರಾದಲ್ಲಿರುವುದೇ ವೇರಿಯಬಲ್ ಡಿ.ಎ. ಈ ಅಂಗೀಕಾರವನ್ನು ಮಾನ್ಯ ಮಾಡುತ್ತೇವೆಂದು ತಾವು ಹೇಳಿದ್ದೀರಿ, ಆದರೆ ನಿಮ್ಮ ದುರ್ವ್ಯವಹಾರದಿಂದಾಗಿ ನಾವು ನಿಮಗೆ ಕೊಟ್ಟಂಥ ಅಭಿನಂದನೆಗಳನ್ನು ಉಳಿಸಿಕೊಳ್ಳುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಇದು ದುರ್ದೈವ.....

ಶ್ರೀ ಡಿ. ದೇವರಾಜ ಅರಸ್.—ಅವರು ಯಾವ ಆಧಾರದಮೇಲೆ ನಗುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಕ್ಕೋಸ್ಕರ ನಗುತ್ತಿದ್ದಾರೆ? ಇಲ್ಲ ನೋಟಿಫಿಕೇಷನ್‌ನಲ್ಲಿ ೮-೧೦ ಪೈಸೆ ಎಂದು ತೀರ್ಮಾನ ಮಾಡಿದ್ದನ್ನು ಕಡಿಮೆ ಮಾಡಿದ್ದಕ್ಕೋಸ್ಕರ ಕುಶಿ ಪಟ್ಟು ನಗುತ್ತಿದ್ದಾರೋ ಏನು ಸಮಾಚಾರ ಇದು.

ಶ್ರೀ ಜೆ.ಹೆಚ್. ಪಟೇಲ್.—ಅವರು ನಕ್ಕಿದ್ದು ಏತಕ್ಕೆ ದರೆ ನಮ್ಮ ಯೋಗ್ಯತೆ ಅವರಿಗೆ ಗೊತ್ತಿಲ್ಲದೆ ನಮಗೆ ಅಭಿನಂದನೆ ಮಾಡಿಬಿಟ್ಟರು. ಈಗ ನಮ್ಮ ಯೋಗ್ಯತೆ ಗೊತ್ತಾಯಿತು ಎಂದು ಕುಶಿ ಪಟ್ಟು ನಕ್ಕುಬಿಟ್ಟರು.

ಶ್ರೀ ಬಿ. ವಿ. ಕಕ್ಕಿಲಾಯ.—ವೇರಿಯಬಲ್ ಡಿ.ಎ. ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ೧೫ನೇ ತಾರೀಖು ಲೇಬರ್ ಕಾನ್‌ಫರೆನ್ಸ್ ತ್ರಿಪಕ್ಷೀಯ ಸಮ್ಮೇಳನದಲ್ಲಿ ಆದನ್ನು ಕೊಡಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಡ್ರಾಫ್ಟ್ ನೋಟಿಫಿಕೇಷನ್‌ನಲ್ಲಿ ಸೇರಿಸಿದ್ದಾರೆ. ಅದು ಕೋರ್ಟಿನಲ್ಲೂ ಅಂಗೀಕಾರವಾಯಿತು. ಬೋರ್ಡಿನಲ್ಲಿಯೂ ಅಂಗೀಕಾರವಾಯಿತು. ಈ ರಾಜ್ಯದಲ್ಲಿ ಶ್ರೀ ಮಾನ್ ದೇವರಾಜ ಅರಸ್ ರವರು ಕಾಲದಲ್ಲಿ ಅವರೂಕೂಡ ಲೇಬರ್ ಮಿನಿಸ್ಟರ್ ಆಗಿದ್ದರು. ಶ್ರೀಮಾನ್ ಬಾಳಿಗಾರವರು ಲೇಬರ್ ಮಿನಿಸ್ಟರ್ ಆಗಿದ್ದರು. ಶ್ರೀಮಾನ್ ಬಾಳಿಗರವರ ಬಗ್ಗೆ ನನಗೆ ಬಹಳ ಗೌರವವಿದೆ. ಒಂದು ಸಂದರ್ಭದಲ್ಲಿ ಅವರ ಜೊತೆಯಲ್ಲಿ ಮಾತನಾಡ ಬೇಕಾದರೆ ಅವರು ಮಿಲ್ ಮಾಲೀಕರಿಗೆ ಲೀಗಲ್ ಅಡ್ವೈಸರ್, ವಕೀಲರಾಗಿದ್ದರು. ಅವರು ಲೇಬರ್ ಮಿನಿಸ್ಟರ್ ಆದಮೇಲೆ ಅವರ ಚೇಂಬರ್‌ಗೆ ಹೋಗಿ ಮಾತುಕತೆ ನಡೆಸಿದಾಗ ಒಂದು ಮಾತನ್ನು ಹೇಳಿದರು. ನಾನು ಮಂತ್ರಿಯಾಗುವ ಪಲೆಗೆ ನಿಮ್ಮ ವಕೀಲನಾಗಿದ್ದೆ. ಈವತ್ತು ನಾನು ನಿಮ್ಮ ವಕೀಲನಲ್ಲ. ನಾನು ಇರುವುದು ಕಾರ್ಮಿಕರ ಹಿತರಕ್ಷಣೆ ಮಾಡಲಿಕ್ಕೆ. ನಿಮ್ಮ ಹಿತರಕ್ಷಣೆ ಮಾಡಲಿಕ್ಕೆ ಅಲ್ಲ. ನಿಮಗೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಇದೆ. ನಿಮ್ಮ ಲಾಯರು ಇರುತ್ತಾರೆ. ನೀವು ಅವರನ್ನು ಕೇಳಬೇಕು. ನಾನು ಇರುವುದು ಕಾರ್ಮಿಕರ ಹಿತರಕ್ಷಣೆ ಮಾಡುವುದಕೆಂದು ಶ್ರೀಮಾನ್ ಬಾಳಿಗಾರವರು ಹೇಳಿದರು. ನೀವು ಯಾವುದೇ ಕಾರ್ಖಾನೆಗೆ ಹೋದರೂ ನಿಮ್ಮ ಲೀಗಲ್ ಅಡ್ವೈಸರ್ ಬಂದಿರಲಿಕ್ಕೆ ಇಲ್ಲವೆಂದು ಭಾವಿಸುತ್ತೇನೆ. ಅವರು ಬಂದರೆ ಕಂಪೆನಿಯೇ ಮುಳುಗಿಹೋಗುತ್ತದೆ. ಆದರೂ ಕೂಡ ನೀವು ಏತಕ್ಕೆ ವಕಾಲತ್ತು ವಹಿಸುತ್ತೀರಿ. ಬೋರ್ಡಿನಲ್ಲಿ ತೀರ್ಮಾನ ಮಾಡಿದರೂ ಕೂಡ ವೇರಿಯಬಲ್ ಡಿ. ಎ. ತೆಗೆದುಹಾಕಿದ್ದೀರಿ. ೮–೧೦ ಪೈಸೆ ಇದ್ದುದನ್ನು ೨–೪ ಪೈಸೆಗೆ ಇಳಿಸಿದಿರಿ. ಮಾನ್ಯ ಮುಖ್ಯ ಮಂತ್ರಿಗಳಿಗೆ ಇದು ಗೊತ್ತಿರುತ್ತದೆಯೋ ಇಲ್ಲವೋ. ಇದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದಿಯೋ ಇಲ್ಲವೋ, ಗೊತ್ತಿಲ್ಲ. ಏಕಾಏಕಿಯಾಗಿ ತೀರ್ಮಾನವಾದುದು ಈ ರಾಜ್ಯದಲ್ಲಿ ಮೊದಲನೆಯಸಲ. ಒಮ್ಮೆ ತೀರ್ಮಾನ ಮಾಡಿ ಮದ್ಯದಲ್ಲಿ ಬದಲಾವಣೆ ಮಾಡಿ ಕಾರ್ಮಿಕರ ತಲೆಯಮೇಲೆ ಕಲ್ಲುಹಾಕತಕ್ಕಂಥ ನೀತಿಯನ್ನು ಸರ್ಕಾರ ಕೈಗೊಂಡಿರತಕ್ಕಂಥದ್ದು ಈ ರಾಜ್ಯದ ಚರಿತ್ರೆಯಲ್ಲಿ ಇದು ಮೊದಲನೆಯದಾಗಿದೆ. ಕಾರ್ಮಿಕರ ಮುಖಕ್ಕೆ ಮಸಿ ಬಳಿಯತಕ್ಕಂಥ ಕೆಲಸವನ್ನು ತಾವು ಮಾಡಿದ್ದೀರಿ. ಅವರುಗಳ ವೇದನೆ ನೋವನ್ನು ಹೇಳುತ್ತಾ ಒಂದು ಚರಿತ್ರೆಯನ್ನೇ ನೀವು ನಿರ್ಮಾಣ ಮಾಡಿದ್ದೀರಿ. ಇದನ್ನು ಜಾರಿಗೆ ಯಾವಾಗ ಕೊಟ್ಟಿರಿ ಎಂದರೆ ಜನವರಿಯಲ್ಲಿ ಕೊಟ್ಟಿರಿ. ೧೯೮೧ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಬಂದಂಥ ಡ್ರಾಫ್ಟ್ ನೋಟಿಫಿಕೇಷನ್ ಫೈನಲೈಸ್ ಆಗಿ ಬಂದರೂ ಅದನ್ನು ನಾಲ್ಕು ತಿಂಗಳ ಕಾಲ ಇಟ್ಟುಕೊಂಡು ಜುಲೈನಲ್ಲಿ ಕೊಟ್ಟಿರಿ. ನಾನು ಹೇಳುತ್ತೇನೆ ೭೦ ಪೈಸೆ ಕೂಲಿಯನ್ನು ಕಡಿಮೆ ಮಾಡಿದ್ದೀರಿ. ತುಟ್ಟಿಭತ್ಯ ಹೋಯಿತು. ಬರೆ ೭೦ ಪೈಸೆಯನ್ನು ಕಡಿಮೆ ಮಾಡಿದ್ದರಿಂದ ಐದುನೂರು ಕೋಟಿ ಬೀಡಿ ತಯಾರಾಗುವಂಥ ಗಣೇಶ ಬೀಡಿ ಮಾಲೀಕರಿಗೆ ಒಂದು ವರ್ಷಕ್ಕೆ ೩೫ ಸಾವಿರ ಈ ಒಂದು ಬಾಬತ್ತಿನಿಂದಲೆ ತಾವು ಉಳಿಸಿಕೊಟ್ಟಿದ್ದೀರಿ. ಮೂರು ಕೋಟಿ ಭಾರತ್ ಬೀಡಿ ಮಾಲೀಕರಿಗೆ ತಾವು ಹಣವನ್ನು ಉಳಿಸಿ ಕೊಟ್ಟಿರುತ್ತೀರಿ. ಕಾರ್ಮಿಕರಿಗೆ ವೇಜಸ್ ನಿಗದಿಯಾದಮೇಲೆ, ಈವತ್ತಿನ ಪರಿಸ್ಥಿತಿ ಬೆಲೆಗಳು ಗಗನಕ್ಕೆ ಏರುತ್ತಿರುವಾಗ ಕಳೆದ ೧೨ ತಿಂಗಳಿಂದ ನೀವು ಅಧಿಕಾರಕ್ಕೆ ಬಂದಮೇಲೆ ಬೆಲೆ ದಿನೇದಿನೇ ಏರುತ್ತಿರುವಾಗ ಡ್ರಾಫ್ಟ್ ನೋಟಿಫಿಕೇಷನ್ ಬಂದಮೇಲೆ ತುಟ್ಟಿಭತ್ಯವನ್ನು ಕೊಡುವುದಕ್ಕೆ ಕಲ್ಲುಹಾಕಿದ್ದೀರಿ. ಇದರಿಂದ ಕೋಟ್ಯಾಂತರ ರೂಪಾಯಿ ನಮ್ಮ ಕಾರ್ಮಿಕರಿಗೆ ನಷ್ಟವಾಯಿತು. ಅವರ ಜೀವನ ಕಷ್ಟವಾಯಿತು ಎನ್ನುವುದನ್ನೂ ಕೂಡ ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ನಾವು ಮಾಲೀಕರ ಜೊತೆಯಲ್ಲಿ ಎಷ್ಟೊ ಸಾರಿ ಮಾತುಕತೆ ನಡೆಸುವಾಗ ನಮಗೆ ಹೇಳುತ್ತಾರೆ ನಿಮಗೆ ಏತಕ್ಕೆ ಕೊಡಬೇಕು, ನಿಮಗೆ ಏತಕ್ಕೆ ಕೂಲಿ ಜಾಸ್ತಿ ಮಾಡಬೇಕು, ನಿಮಗೆ ಒಂದು ರೂಪಾಯಿಯನ್ನೂ ಕೊಡುವುದಿಲ್ಲ. ನಿಮ್ಮ ಮಂತ್ರಿಗಳೇ ನಮಗೆ ಸಾಕು. ನಾವು ಅವರನ್ನು ನೋಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಅಸಂಗಟಿತರಾದ ಕೈಗಾರಿಕಾ ಕಾರ್ಮಿಕರು ಹಳ್ಳಿಗಳಲ್ಲಿ ಇರತಕ್ಕಂಥ ಕಾರ್ಮಿಕರು, ಘೋಷಾ ಹೆಂಗಸರು. ಹಿಂದುಳಿದ ವರ್ಗದಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರು, ಮನೆ ಮನೆಗಳಲ್ಲಿ ಬೀಡಿ ಕಟ್ಟುತಕ್ಕಂಥ ಜನ' ಪಬ್ಲಿಕ್ ಸೆಕ್ಟಾರ್‌ನಲ್ಲಿ ಈ ರೀತಿ ವ್ಯವಹಾರ ಮಾಡಿದ್ದರೆ. ಬೆಂಗಳೂರು ನಗರದಲ್ಲಿ ಇರತಕ್ಕಂಥ ೭೦ ಸಾವಿರ ಜನ ಕಾರ್ಮಿಕರು, ೫ ಲಕ್ಷ ಜನ ನಗರ ಕಾರ್ಮಿಕರು ನಿಮ್ಮನ್ನು ಒಂದು ಕೈ ನೋಡಿಕೊಳ್ಳುತ್ತಿದ್ದರು. ಹಳ್ಳಿಗಳಲ್ಲಿ ಭಿನ್ನ ಭಿನ್ನವಾಗಿ ಇರತಕ್ಕಂಥ ಜನ ಅವರನ್ನೆಲ್ಲ ಒಂದುಕಡೆ ನಿಲ್ಲಿಸುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿಯಲ್ಲಿರುವಂಥ ಅಸಂಗಟಿತರಾದಂಥ ಕಾರ್ಮಿಕರು ದೌರ್ಬಲ್ಯರಾಗಿರತಕ್ಕಂಥವರ ಶೋಷಣೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತೀರಿ ಎನ್ನುವ ಆರೋಪಣೆ ಈ ಸದನದಲ್ಲಿ ಮಾಡಬೇಕಾಗಿದೆ.

ಇದರ ಬಗ್ಗೆ ಇನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಬೇರೆ ಸದಸ್ಯರು ಮಾತನಾಡುವವರಿದ್ದಾರೆ. ಇನ್ನೊಂದು ಮಾತನ್ನು ಹೇಳಬೇಕಾಗಿದೆ ಇದಾದಮೇಲೆ ಮಾನ್ಯ ಮಂತ್ರಿಗಳಿಗೆ ಬುದ್ಧಿ ದಬಹುದು.

SRI A.B. JAKANUR.—Sir, I protest. He cannot threaten the Minister.

SRI B.V. KAKKILAYA.—You can protest while giving your reply. You protest and reply. If the Chief Minister were here I would have demanded your dismissal. Today I am making that demand. We have not seen a Labour Minister like this so for. Sri Azeez Sait was the Labour Minister. Sri Ibrahim was the Labour Minister. But I have not seen such a LabourMinister who is blantatly refusing to see the reason. He has taken all the powers of the Labour Commissioner. He has to pass order on every issue. The references is made. Before the Commissioner are pending before him. He is making wrong references when workers are retrenchedwhen reference about that is made. What is the reference ? The reference is whether the retrenchment is illega or not, whether it is warranted or not. If it is not justified. this gentleman makes a reference saying that whether the demand of the labourer for reinstatement is justified ? If not, what relief should be given. This is the reference he makes. He is supposed to be a lawyer. He proteses at what I say. I stand by my every word. I am not an irresponsible member. If the High Court makes a reference asking to reconsider a particular question to reopen the factory which is under lock out for one year, he does not refer to that matter. He does not declare the lock out as illegal. But when the High Court asks him to reconsider he says that it is only to reconsider and he takes six months to reconsider. Even today he has not done it. What sort of Labour Minister he is. ನೋಟಿಫಿಕೇಶನ್ ಕೊಟ್ಟು ಬೋರ್ಡ್ ಮುಂದೆ ಬಂದಿದೆ. ಅದನ್ನು ಪಾಠಾನೆ ಮಾಡಿಬಿಟ್ಟರು. ಪ್ರತಿಯೊಂದರಲ್ಲಿಯೂ ಕೂಡ ಒಬ್ಬರು ಮಾಲೀಕರ ಪರವಾಗಿ, ಇನ್ನೊಬ್ಬರು ಕಾರ್ಮಿಕರ ಪರವಾಗಿ ಮೂವ್ ಮಾಡಿದ್ದಾರೆ. ಸರ್ಕಾರ ಹೊರಡಿಸಿದಂಥ ಡ್ರಾಫ್ಟ್ ನೋಟಿಫಿಕೇಶನ್‌ನನ್ನು ಅಪ್ರೂವ್ ಮಾಡಬೇಕೆಂದು ಯಾರು ಸ್ವಾಮಿ ಮೂವ್ ಮಾಡಬೇಕು. ಯಾರು ಮೂವ್ ಮಾಡಬೇಕೆಂದು ತಮ್ಮನ್ನೇ ಕೇಳುತ್ತೇನೆ. ಸರ್ಕಾರೀ ಡ್ರಾಫ್ಟ್ ಅದನ್ನು ಅಂಗೀಕರಿಸಬೇಕೆಂದು ಈ ಸಭೆಗೆ ಯಾರು ಮೂವ್ ಮಾಡಬೇಕಾಗಿರುವುದು. ಮಾನ್ಯಮಂತ್ರಿಗಳು ಮೂವ್ ಮಾಡಬೇಕು. ಅದನ್ನು ಮಂತ್ರಿಗಳು ಮಾಡುವುದಿಲ್ಲ ಏತಕ್ಕೆ ಮೂವ್ ಮಾಡುವುದಿಲ್ಲವೆಂದರೆ ಅವರು ಅದನ್ನು ತಾವೇ ಕೈಯಲ್ಲಿ ಇಟ್ಟುಕೊಳ್ಳಬೇಕು, ಯಾರೋ ಒಬ್ಬರು ಕಡಿಮೆಮಾಡಿ ಎಂದು ಮೂವ್ ಮಾಡುತ್ತಾರೆ. ಅದನ್ನು ತಿರಸ್ಕಾರ ಮಾಡುತ್ತಾರೆ ಒಬ್ಬರು ಹೆಚ್ಚು ಮಾಡಿ ಎಂದು ಹೇಳುತ್ತಾರೆ. ಅದನ್ನು ತಿರಸ್ಕಾರ ಮಾಡುತ್ತಾರೆ. ಕೊನೆಗೆ ಯಾರೋ ಒಬ್ಬರು ಕೊನೆಗೆ ಆಷ್ಟೇ ಬರಲಿ ಎಂದು ಹೇಳಿ ಮೂವ್ ಮಾಡುತ್ತಾರೆ.

೧-೨೦ ಪಿ.ಎಂ.

ಓಟು ಮಾಡುವಾಗ ಮಾತ್ರ ಮಾಲೀಕರು ವಿರುದ್ಧ ಮಾಡುತ್ತಾರೆ. ಸರ್ಕಾರದ ಅಧಿಕಾರಿಗಳು ಕಾರ್ಖಾನೆಯ ಪ್ರತಿನಿಧಿಗಳು ಮತ ಹಾಕಿ ಬಹುಮತದಿಂದ ಅಂಗೀಕಾರವಾಗಿದೆ. ಪ್ರತಿಯೊಂದು ನೋಟಿಫಿಕೇಷನ್‌ನಲ್ಲಿ ಸರ್ಕಾರದ ಎಲ್ಲಾ ಅಧಿಕಾರಿಗಳು ಎಲ್ಲಾ ಪ್ರತಿನಿಧಿಗಳು ಇದ್ದಾರೆ ಅವರಿಗೆ

ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಲೇಬರ್ ಕಮಿಷನರ್, ಆಸಿಸ್ಟೆಂಟ್ ಲೇಬರ್ ಕಮಿಷನರ್ ಕಾರ್ಮಿಕ ಇಲಾಖೆಯ ಅಧಿಕಾರಿಗಳೆಲ್ಲರೂ ನೋಟಿಫಿಕೇಷನ್‌ನನ್ನು ಮಾನ್ಯ ಮಾಡಬೇಕೆಂದು ಅವರು ಓಟು ಹಾಕುತ್ತಾರೆ. ಇಷ್ಟಾದರೂ ಮಾಲೀಕರು ಬೆಂಬಲ ಕೊಡುವುದಿಲ್ಲ, ಮಾನ್ಯ ಮಂತ್ರಿಗಳು ಮಾತ್ರ ತಟಸ್ಥರಾಗಿರುತ್ತಾರೆ ಕಾರ್ಮಿಕರು ಇವರಿಗೇಕೆ ಬೇಕು ? ಅವರು ಹೇಳಿದರು ಈಗ ತಂದಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಮಂಜೂರಾಗಿ ಎಷ್ಟು ದಿವಸಗಳಾಗಿವೆ.

ಶ್ರೀ ಬಿ.ವಿ. ಕಕ್ಕಿಲಾಯ.—೧೯೮೧ನೇ ಜುಲೈ ೨೩ನೇ ತಾರೀಖು, ಡ್ರಾಫ್ಟ್ ಬಂದಿದೆ. ಜನವರಿ ೧೯೮೨ರಂದು ಬೋರ್ಡ್ ಮುಂದೆ ಬಂತು. ಜುಲೈಯಿಂದ ಜನವರಿವರೆಗೆ ಬೋರ್ಡ್ ಮುಂದೆ ಬರಲಿಲ್ಲ. ಇದು ನೋಟಿಫಿಕೇಷನ್ ಆಗಿಲ್ಲ. ಇದು ಬೆಳಕು ಕಾಣಲಿಲ್ಲ ಏತಕ್ಕೆ ಹೀಗಾಯಿತು ? ಬೋರ್ಡ್‌ನಲ್ಲಿ ಬಹುಮತದಿಂದ ತೀರ್ಮಾನವಾಗಿ ಇದು ಗೆಜೆಟ್‌ನಲ್ಲಿ ಪ್ರಿಂಟ್ ಆಗುವುದು ಯಾವಾಗ ? ಓಟು ಹಾಕುವುದಕ್ಕೆ ಇಷ್ಟವಿಲ್ಲ. ಪ್ರಿಂಟ್‌ಗೆ ಕಳುಹಿಸಿ. ಯಾರು ಬರುತ್ತಾರೆಂದೂ ಕಾದೂ ಕುಳಿತುಕೊಂಡಿದ್ದೀರಿ ?

ಶ್ರೀ ಪಂಪಾಪತಿ.—ಮಾಲೀಕರು ಬರುತ್ತಾರೆಂದು ಕಾದು ಕೂತಿದ್ದಾರೆ.

ಶ್ರೀ ಬಿ.ವಿ. ಕಕ್ಕಿಲಾಯ.—ಒಳ್ಳೆಯ ದಿವಸ, ಮುಹೂರ್ತ ನೋಡುತ್ತಿದ್ದೀರಾ ? ಯಾರನ್ನು ಕಾಯುತ್ತಿದ್ದೀರಿ ? ಒಂದು ದಿವಸ ತಡವಾದರೆ ಕಾರ್ಮಿಕರಿಗೆ ಎಷ್ಟು ಕಷ್ಟ ಎಂಬುದು ತಮಗೆ ಗೊತ್ತಿದೆಯೇ? ಕಾರ್ಮಿಕರೆಲ್ಲಾ ಹೆಚ್ಚು ಸಂಬಳ ಬರುವವರು ಎಂದು ತಿಳಿದುಕೊಂಡಿದ್ದೀರಾ ? ಆಸಿಡ್ ಗಳಲ್ಲಿ ಕೈಕಾಲು ಆದ್ದಿಕೆಲಸ ಮಾಡತಕ್ಕ ಜನ ಹರಿಜನ ಗಿರಿಜನರ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದವರು, ನಾವು ನೀವು ಅದರಲ್ಲಿ ಕೆಲಸ ಮಾಡುವುದಿಲ್ಲ. ಟ್ಯಾನರೀಸ್, ಲೀದರ್ ಪ್ಲೇವುಡ್, ಕಾಫಿ ಕರಿಂಗ್, ಸ್ಟೋನ್ ಬ್ರೇಕಿಂಗ್, ಅಂಡ್ ಸ್ಟೋನ್ ಕ್ರಷಿಂಗ್, ಟೈಲರಿಂಗ್, ಟ್ಯಾಡಿ ಟ್ಯಾಪಿಂಗ್ ಜನಾಂಗದ ಮಂಗಳೂರಿನ ಜನಾರ್ಧನ ಪೂಜಾರಿಯವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ, Ceramic stoneware and potteries, rice flour. dal mills. Cotton Ginning & Pressing and manufacturing, Khandasari sugar factory. printing presses, Agarbathi, construction and maintenance of roads, buildings operation. ಇವರು ಕೂಡ ಬದುಕಬೇಕೆಂಬ ಲವಲವಿಕೆ ಅವರಲ್ಲಿದೆ. ಅವರು ಹೋಗಿಬಿಟ್ಟರೆ ಜನಸಂಖ್ಯೆ ಕಡಿಮೆಯಾಗುತ್ತದೆಂದು ನೀವು ತಿಳಿದುಕೊಂಡಿರಬಹುದು. ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಕಷ್ಟದ ಕೆಲಸ ಮಾಡತಕ್ಕ ೧೨ ಸಾವಿರ ಜನ ಇದ್ದಾರೆ, ಅವರು ನಿಮ್ಮ ಜೀತದಾಳುಗಳು. ಅವರಿಗೆ ಕನಿಷ್ಠವೇತನ ನಿಗದಿ ಮಾಡಿ ಅವರ ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲವೇನು ? ಮಾನ್ಯ ಕಾಗೋಡು ತಿಮ್ಮಪ್ಪನವರು ನೋಟಿಫಿಕೇಷನ್ ಬೇಗ ಪ್ರಕಟಣೆಯಾಗಿ ಕಾರ್ಮಿಕ ಮಂತ್ರಿಗಳಿಂದ ಸಹಿ ಆಗಿ ಬಂದರೆ ಕೊಡುವುದಕ್ಕೆ ನನ್ನ ಆಕ್ಷೇಪಣೆ ಇಲ್ಲವೆಂದು ಹೇಳಿದ್ದಾರೆ. ತಾವು ಏತಕ್ಕೆ ಹಾಗೆ ಇಟ್ಟುಕೊಂಡಿದ್ದೀರಿ ? ಪ್ರೈವೇಟ್ ಕಂಟ್ರಾಕ್ಟರ್ಸ್ ಅಬ್ಜಕ್ಷನ್ ಮಾಡುತ್ತಾರಾ ? Carpentary Saw-mill, Agriculture under part II of the Soil conservation ಅಪ್ರೂ ಆಗಿರುವುದನ್ನು ದಯಮಾಡಿ ಕೂಡಲೇ ಜಾರಿಗೆ ತನ್ನಿ.

ಶ್ರೀ ಡಿ. ದೇವರಾಜ ಅರಸ್.— ದಯಮಾಡಿ ಎಂದು ಹೇಳಬೇಡಿ, ಕೊಡಿ ಎಂದು ಹೇಳಿ.

ಶ್ರೀ ಬಿ.ವಿ. ಕಕ್ಕಿಲಾಯ.—ಎಷ್ಟು ಮಾತನಾಡಿದರೂ ಅಷ್ಟೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಕಾರ್ಮಿಕ ಮಂತ್ರಿಗಳನ್ನು ಮೊದಲು ತೆಗೆಯಬೇಕು. ನಮಗೆ ಕಾರ್ಮಿಕರ ಬಗ್ಗೆ ಕಾಳಜಿ ಇರತಕ್ಕ ಕಾರ್ಮಿಕರ ಬಗ್ಗೆ ಅನುಕಂಪ ಇರುವಂತಹ, ಸಕಾಲದಲ್ಲಿ ಪ್ರಮಾಣಿಕವಾಗಿ ವರ್ತಿಸುವ ಒಬ್ಬರನ್ನು ನೇಮಕ ಮಾಡಬೇಕೆಂದು ನಾನು ಈ ಸದನದ ಸದಸ್ಯನಾಗಿ ಕಾರ್ಮಿಕರ ಪರವಾಗಿ ಕೆಲಸ ಮಾಡತಕ್ಕ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬೇರೆ ಯಾರನ್ನಾದರೂ ಕಾರ್ಮಿಕ ಮಂತ್ರಿಯನ್ನಾಗಿ ನೇಮಕ ಮಾಡಿ ಇವರು ಸಹಿಸುವುದಕ್ಕಿಂತ ಮಿಗಿ ಮುಂದೆ ಹೋಗಿದ್ದಾರೆಂದು ಪ್ರಸ್ತಾಪ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ರಾಮಭಟ್.—ಮಾನ್ಯ ಸದಸ್ಯರಾದ ಕಕ್ಕಿಲಾಯರು ಹೇಳಿದ್ದು ನಾನು ಒಪ್ಪಿಕೊಳ್ಳುತ್ತೇನೆ. ಕಾರ್ಮಿಕರ ಪರವಾಗಿ ಒಂದು ಬುಕ್‌ಲೆಟ್ ಪ್ರಿಂಟ್ ಮಾಡಿದ್ದಾರೆ. ಅದನ್ನು ನಾನು ಓದಿ

ಹೇಳುತ್ತೇನೆ. ಸಿನಿಮಾ ಮಾಲೀಕರಿಂದ ೨೫ ಲಕ್ಷ,ಕಾರ್ಖಾನೆ ಮಾಲೀಕರಿಂದ ೫೦ ಲಕ್ಷ ಮತ್ತು ಹೋಟೆಲು ಮಾಲೀಕರಿಂದ ೭೫ ಲಕ್ಷ ಹಣ ತೆಗೆದುಕೊಂಡಿದ್ದಾರೆಂದು ಆಪಾದನೆ ಉಂಟು. ಮಾನ್ಯ ಕಕ್ಕಿಲಾಯರು ಸ್ಪಷ್ಟವಾಗಿ ಹೇಳಲಿಲ್ಲಿಇದಕ್ಕೆ ಏನು ಕಾರಣ ಏನು ಅಂದರೆ, ಇದೇ ಕಾರಣ. ೨೫,೫೦,೭೫ ಲಕ್ಷ ರೂಪಾಯಿ ಆಪ್ಶೊಂದು ತೆಗೆದುಕೊಂಡಿದ್ದಾರೆ.

ಶ್ರೀ ಪಂಪಾಪತಿ.—ಕಾರ್ಮಿಕ ಇಲಾಖೆಯ ಮಂತ್ರಿಗಳೇನಿದ್ದಾರೆ, ಅವರು ಈಗಾಗಲೇ ಹೊರಡಿಸಿರ ತಕ್ಕ ಪತ್ರಗಳನ್ನು ಮಂಜೂರು ಮಾಡಬೇಕಾಗಿತ್ತು. ಸರ್ಕಾರ ಕಾರ್ಮಿಕರಿಗೆ ಅನ್ಯಾಯ ಮಾಡಿದೆ, ಬಹಳ ತಡ ಮಾಡಿದ್ದಾರೆ. ಆದಷ್ಟು ಜಾಗ್ರತೆ ಮಂಜೂರು ಮಾಡಬೇಕು, ಏತಕ್ಕೆ ಇದುವರೆಗೆ ಮಂಜೂರು ಮಾಡಲಿಲ್ಲ ಎನ್ನುವುದಕ್ಕೆ ಮಾನ್ಯ ಸದಸ್ಯರು ಈಗಾಗಲೇ ಜೇಳಿದ್ದಾರೆ. ರಾಮಭಟ್ ರವರು ಹೇಳಿದಹಾಗೆ ಮಿಟಿಂಗ್ ಮಾಡಿ ನೋಟಿಫಿಕೇಶನ್ ಹೊರಡಿಸುವಾಗ ಮಾಲೀಕರಿಗಾಗಿ ಕಾಯುತ್ತಿರುತ್ತಾರೆ. ಅಪ್ರೂ ಮಾಡದೆ ಕೂತುಕೊಂಡು ಗಂಟು ಹೊಡೆಯುವುದೇನು ಇದರ ಅರ್ಥ ?

ಉಪಾಧ್ಯಕ್ಷರು.— ಮಾನ್ಯ ಸದಸ್ಯರು ಬೇರೆ ವಿಷಯಗಳಿದ್ದರೆ ಮಾತನಾಡಿ.

ಶ್ರೀ ಪಂಪಾಪತಿ.—ಇಡೀ ರಾಜ್ಯದ ಜನ ಹೇಳುತ್ತಾರೆ ಇವರು ಏತಕ್ಕೋಸ್ಕರ ಹಾಗಿ ಕುಳಿತಿದ್ದಾರೆಂದೂ ಮಾಲೀಕರು ಹಣ ಸಂಗ್ರಹ ಮಾಡಿ ಕೊಟ್ಟಿರುವುದರಲ್ಲಿ ಸ್ವಲ್ಪ ಕಡಿಮೆಯಾಗಿರಬೇಕು. ಆ ಹಣವನ್ನು ಸಂಗ್ರಹ ಮಾಡಿಕೊಂಡು ಬರುವವರೆಗೂ ಕಾರ್ಮಿಕರ ಗತಿ ಏನಾಗಬೇಕು ? ಸಾವಿರಾರು ಜನ ಕಾರ್ಮಿಕರು ಹೇಗೆ ಜೀವನ ಮಾಡಬೇಕು ? ಕನಿಷ್ಟ ಕೂಲಿ ನಿಗದಿ ಮಾಡಲು ಇಷ್ಟೊಂದು ತಡವಾದರೆ ಅವರಂ ಜೀವನ ಮಾಡುವುದು ಕಷ್ಟವಾಗುತ್ತಿದೆ. ಇವತ್ತು ಸಿನಿಮಾ ಮತ್ತು ಹೋಟೆಲ್‌ನ ಕಾರ್ಮಿಕರು ಉಪವಾಸ ಕುಳಿತ್ತಿದ್ದಾರೆ. ಕೇವಲ ೨೦೦ ರೂಪಾಯಿ ಸಂಬಳದಲ್ಲಿ ಹೇಗೆ ಜೀವನ ಮಾಡುತ್ತಾರೆ ? ಕನಿಷ್ಟ ಕೂಲಿಯನ್ನು ಬೇಗ ನಿಗದಿ ಮಾಡಬೇಕು. ಕಾರ್ಮಿಕರು ಸಂಘಟನೆಯಾಗಿ ಮಾಲೀಕರು, ಮಾಲೀಕರು, ಅಧಿಕಾರಿಗಳು ಮಂತ್ರಿಗಳು ಸೇರಿ ತೀರ್ಮಾನ ಮಾಡಿದ್ದರು ಜಾರಿಗೆ ತರುವುದಕ್ಕೆ ಏನು ಕಷ್ಟವಾಗುತ್ತಿದೆ.

ಇದು ನಮಗೆ ಗೊತಾಗಬೇಕು. ಈಗ ಬೋರ್ಡು ಏನು ತೀರ್ಮಾನ ಮಾಡಿದೆ, ಅದನ್ನು ಯಾವ ಒಂದು ವ್ಯತ್ಯಾಸವೂ ಇಲ್ಲದೆ ಮಾನ್ಯಮಂತ್ರಿಗಳು ಜಾರಿಗೆ ತರಬೇಕು. ಒಂದು ವೇಳೆ ಏನಾದರೂ ವ್ಯತ್ಯಾಸ ಮಾಡಿದರೆ ಇಡೀ ಕರ್ನಾಟದ ಕಾರ್ಮಿಕ ವರ್ಗ ನಿಮ್ಮ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳುತ್ತದೆಂಬ ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಆದ್ದರಿಂದ ಸರಕಾರದ ಅಧಿಕಾರಿಗಳು.....

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಈಗ ಒಂದೂವರೆ ಗಂಟೆಯಾಯಿತು.

ಶ್ರೀ ಪಂಪಾಪತಿ.—ಇವರಿಗೆ ಕಾರ್ಮಿಕರ ಬಗ್ಗೆ ಎಷ್ಟು ಕಳಕಳಿ ಇದೆ ಎಂಬುದು ಇದರಿಂದಲೇ ತಿಳಿಯುತ್ತದೆ.

ಶ್ರೀ ಡಿ.ಟಿ. ರಾಮು.—ಕಾರ್ಮಿಕರ ಬಗ್ಗೆ ನಿಮಗಿರುವಷ್ಟೇ ಕಳಕಳಿ ನಮಗೂ ಸಹ ಇದೆ.

ಶ್ರೀ ಪಂಪಾಪತಿ.—ಇದ್ದರೆ ನೀವು ಸಹ ಮಾತನಾಡಿ.

ಶ್ರೀ ಕರಿಬಸವನಗೌಡ.—ನೀವು ಜೋರಾಗಿ ಮಾತನಾಡಿದರೆ ನಾವು ಸಹ ಮಾತನಾಡಬೇಕಾಗುತ್ತದೆ. ನಮಗೂ ಸಹ ಮಾತನಾಡಲು ಬರುತ್ತದೆ.

ಉಪಾಧ್ಯಕ್ಷರು. ತಾವು ಜಾಗ್ರತೆ ಮುಗಿಸಿ.

ಶ್ರೀ ಪಂಪಾಪತಿ.—ದಿನಕೂಲಿಯ ಬಗ್ಗೆ ಬೋರ್ಡು ಏನು ತೀರ್ಮಾನ ಮಾಡಿದೆ, ಅದನ್ನು ವಿಳಂಬ ಮಾಡದೆ ಮಾನ್ಯ ಮಂತ್ರಿಗಳು ಜಾರಿಗೆ ತರುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ,

SRI D. DEVARAJ URS (Hunsur).—Hon. member Sri Kakkilaya has exhaustively dealt with the issue. I am not here to add anything but I want to pass on an information through you to this House which I have come to know with respect to a particular category of workers viz., the hotel workers about which the first and second para of the

Minister's statement explain. It is said that the notification is yet to be issued. That is why, he also mentioned that from June on wards it is delayed. Only one point which I want to bring to the notice of this House in support of what Sri Kakkilaya is, the hon. member demanded that the Minister for Labour should be changed. These hotel proprietors have got their Federation. I know an instance where the hoteliers Association's President has collected money to be passed on and the amount fixed is yet not completely contributed to. So it is being delayed. This is what I wanted to bring to the notice of this House. I am not talking in an irresponsible way. Friends wanted to brow-beat the hon. member Sir Pampapathy, who always talk in a louder voice. I am sure the entire House will agree with me that this is a very very important issue and a burning issue which relates to what you call wage earners. Therefore. Sir, I would suggest that this issue shall no more be dealt with by the present Labour Minister. It should be directly dealt with by the Chief Minister or let him appoint somebody else as the Labour Minister. Otherwise, let him continue, I have nothing to to say because it is eft to the Chief Minister concerned.

SRI A.B. JAKANUR (Minister for Labour).—Before referring to the observations of Sri Kakkilaya and others, I wish to read a statement first and then I will reply to other points.

The Minimum Rates of Wages in respect of Hotal Workers *i.e.* employment in Residential Hotels and Eating Houses was last revised in Notification No. SWL 78 LMW 72, dated 14-5-1976. The existing Minimum Rates of wages vary from Rs. 120 to 215 per month according to Zones specified therein.

2. Draft proposals for further revision for this category of employees are under final stage i.e. objections/suggestions received on the Draft proposals issued in Notification No. SWL 106 LMW 78, dated 24-7-1981 have been discussed in the Karnataka State Minimum Wages Advisory Board and after examining the recommendations of the Board and the suggestions received, final notification in this behalf will be issued shortly. There are no specific complaints relating to non-implementation of the Minimum Rates of Wages. However, the enforcing machinery have been suitably instructed to see that the Minimum Rates of Wages are implemented effectively.

3. It is proposed to revise the Minimum Rates of wages in respect of Agricultural Workers from existing rates of wages varying from Rs. 3-25 to Rs. 5-60 per day fixed vide Notification No. SWL 53 LMW 75, dated 20-9-1975. Accordingly preliminary Notification has been issued in No.SWL 36 LMW79, dated 21st July, 1981, calling

for objection/suggestions. The Minimum Wages Advisory Board has been consulted with regard to the objections received. Final Notification will be issued shortly.

4. The Government in addition to the Labour Inspectors have appointed the Revenue Inspectors as Additional Inspectors under Minimum Wages Act for the purposes of implementation of Minimum Wages in Agricultural sector. So far no complaints are received in the department. Action will be taken against defaulting employers as provided under the law.

The wages for the employees in Tobacco (Including Beedi making) manufactory have been revised recently vide Notification No. SWL 27 LMW 81, dated 2-12-1981 giving effect from 1-1-1982. The revised rates vary from Rs. 7-40 per day to Rs. 320 per month.

The wages are being implemented effectively by the implementing machinery. The above notification has been challenged by the M/s Jothi Home Industries, Mangalore and 5 other managements in the High Court.

However, till this date no specific complaints have been received regarding non-implementation of Minimum Rates of Wages.

ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ನನ್ನ ಮೇಲೆ ಆಪಾದನೆ ಹೊರಿಸಿದ್ದಾರೆ ಹಾಗೂ ಕಠಿನವಾದ ಮಾತುಗಳನ್ನು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದರಿಂದ ನಿಮ್ಮ ಮೇಲೆ ಏನೂ ಪರಿಣಾಮವಾಗುವುದಿಲ್ಲ.

ಶ್ರೀ ಎ.ಬಿ. ಜಕನೂರ್—ಏನಾದರೂ ಮಾತನಾಡಿದರೆ ಅದು ಹೇಗೆ ಪರಿಣಾಮವಾಗುತ್ತದೆ ಸರ್ಕಾರದವರು ಸಂವಿಧಾನವನ್ನು ನೋಡುವುದಿಲ್ಲ, ಕಾನೂನು ಕಾಯಿದೆ ನೋಡುವುದಿಲ್ಲ, ತಮಗಿಷ್ಟ ಬಂದಂತೆ ಮಾಡುತ್ತಾರೆ ಎಂದು ಮೇಲಿಂದ ಮೇಲೆ ಮಾನ್ಯ ಸದಸ್ಯರು ಇಲ್ಲಿ ಹೇಳುತ್ತಾರೆ. ಈ ಒಂದು ದೃಷ್ಟಿಯಿಂದ ನಾನಾಗಲೀ ಅಥವಾ ಸರ್ಕಾರವಾಗಲೀ ಕಾನೂನು ಕಾಯಿದೆ ನೋಡಿಕೊಂಡು ಕೆಲಸ ಮಾಡಬೇಕಾಗಿದೆ. ಈ ರೀತಿ ಮಾಡದೆ ವಿರೋಧಪಕ್ಷದವರು ಹೇಳಿದಂತೆ ಹುಕುಂ ಮಾಡಿದರೆ ಅದು ಚೆನ್ನಾಗಿರುತ್ತದೆಯೇ ಎಂದು ನಾನು ತಮ್ಮನ್ನು ಕೇಳಬೇಕಾಗಿದೆ? ಇದಕ್ಕೆ ಸಂಬಂಧಪಟ್ಟಂತೆ ಏನು ಆಕ್ಟ್ ಇದೆ, ಇದರಲ್ಲಿ ಏನು ಒಂದು ಪ್ರಾವಿಜನ್ ಮಾಡಿದ್ದಾರೆ, ಇದರ ಪ್ರಕಾರ ಎರಡು ದಾರಿಗಳು ಇವೆ; ಒಂದನೆಯದು, ಒಂದು ಕಮಿಟಿ ರಚನೆ ಮಾಡಬಹುದು; ನಂತರ ಶಿಫಾರಸ್‌ಗಳನ್ನು ತೆಗೆದುಕೊಂಡು ಅಬ್ಜೆಕ್ಷನ್ ಕಾಲ್‌ಫಾರ್ ಮಾಡುವುದು, ಎರಡನೆಯದು, ಪ್ರೂಲಿಮಿನರಿ ನೋಟೀಸ್ ಇಷ್ಯೂ ಮಾಡಿ ಅಬ್ಜೆಕ್ಷನ್ ಕಾಲ್‌ಫರ್ ಮಾಡುವುದು ಇದಕ್ಕೆ ಕಡಿಮೆ ಎಂದರೆ ೨ ತಿಂಗಳ ಸಮಯ ಕೊಡಲಾಗುತ್ತದೆ. ಆದರೆ ಎರಡು ತಿಂಗಳೇ ಸಾಕು ಎಂದು ಹೇಳಿದರು. ಆದರೆ ಮಿನಿಮಮ್ ಎರಡು ತಿಂಗಳು ಎಂದು ಇರುವುದರಿಂದ ಹೆಚ್ಚು ಸಮಯ ಬೇಕಾದರೆ ಕೊಡಬಹುದು. ಈ ಸಂದರ್ಭದಲ್ಲಿ ಸಂಬಂಧಪಟ್ಟ ಮಾಲೀಕರು ಹಾಗೂ ವರ್ಕರ್ಸ್ ಯೂನಿಯನ್ ಅವರು ತಮ್ಮ ಮನವಿಗಳನ್ನು ಸಲ್ಲಿಸಬಹುದು. ನಂತರ ಇದನ್ನು ತೀರ್ಮಾನ ಮಾಡಲು ಸ್ಟೇಟ್ ಮಿನಿಮಮ್ ವೆಜಸ್ ಅಡ್ವೈಜರಿ ಬೋರ್ಡ್ ಇದೆ. ಅಡ್ವೈಸರಿ ಬೋರ್ಡ್‌ನವರು ಏನು ಒಂದು ನಿರ್ಣಯ ಕೊಡುತ್ತಾರೋ ಆದರಂತೆ ಮಾಡಬೇಕು ಏತಕ್ಕೆ ಮಾಡುವುದಿಲ್ಲ ಎಂದು ಮಾನ್ಯ ಕಕ್ಕಿಲಾಯರವರು ಮತ್ತು ಮಾನ್ಯ ಪಂಪಾಪತಿಯವರು ಹೇಳುತ್ತಾರೆ. ತಾವು ನಾನು ಹೇಳುವುದನ್ನು ಸ್ವಲ್ಪ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. If the Boards decision is binding on the Government, certainly it will be done. This is an advice only. Government can consider. ಒಂದುವೇಳೆ ನಾವು ಅದನ್ನು ಕನ್ಸಿಡರ್

ಮಾಡದೇ ಹೋದರೆ ಮ್ಯಾನೇಜ್‌ಮೆಂಟ್‌ನವರು ಹೈಕೋರ್ಟ್‌ನಲ್ಲಿ ನಮ್ಮ ಹುಕುಂವನ್ನು ಚಾಲೇಂಜ್ ಮಾಡಬಹುದು ಆವಾಗ ಏನು ಪರಿಸ್ಥಿತಿ ಆಗಬಹುದು? ಆವಾಗ ಕಾರ್ಮಿಕರಿಗೆ ಏನಾಗಬಹುದು ನೋಡಿ. ಒಂದು ಸಮಯ ಪ್ರೊಸೀಜರ್‌ನಲ್ಲಿ ಏನಾದರೂ ತಪ್ಪು ಇದ್ದರೆ ಸ್ಟೇ ಆಗುತ್ತದೆ. ಹಿಂದೆ ರಿವಿಷನ್ ಆಗುವಾಗ ಇದರ ಬಗ್ಗೆ ೭-೮ ಸಲ ನೋಟಿಫಿಕೇಷನ್ ಆಗಿದೆ. ಅದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಆಗಿದೆ. ಇನ್ನೂ ಇದುವರೆಗೆ ಡಿಸಿಷನ್ ಏನೂ ಬಂದಿಲ್ಲ. ನಾವು ಅದರ ಬಗ್ಗೆ ಕಾನೂನು ಕಾಯಿದೆಗಳನ್ನು ನೋಡಿ ಕೊಂಡು ಹೈಕೋರ್ಟ್ ಡಿಸಿಷನ್ ಮತ್ತು ಸುಪ್ರೀಂ ಕೋರ್ಟ್ ಡಿಸಿಷನ್ ನೋಡಿಕೊಂಡು ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಅದರಲ್ಲಿ ಏನು ಡಿಸಿಷನ್ ಬರುತ್ತದೆ ಅನ್ನುವುದನ್ನು ನೋಡಿಕೊಂಡು ಮಾಡುತ್ತೇನೆ.

ಇನ್ನು ಮಾನ್ಯ ಸದಸ್ಯರು ಒಂದು ಮಾತು ಹೇಳಿದರು. ಅದೇನೆಂದರೆ ಈ ಸ್ಟೇಟ್ ಆಡ್ವೈಸರಿ ಬೋರ್ಡ್‌ಗೆ ಮಾನ್ಯ ಮಂತ್ರಿಗಳು ಅಧ್ಯಕ್ಷರಾಗಿದ್ದು ಕೊಂಡು ಮತ ಏತಕ್ಕೆ ಹಾಕಲಿಲ್ಲಾ ಎಂದು ಕೇಳಿದರು. There is reason for it. ಸಮವಾಗಿ ಓಟು ಬಂದಿದ್ದರೆ ಮತ ಹಾಕುತ್ತಿದ್ದೆ. ೭-೫ ಬಂದು ಅದು ಪಾಸಾಗಿರುವಾಗ ನಾನು ಒಬ್ಬ ಮತ ಹಾಕಿದರೆ ೮ ಆಗುತ್ತದೆ ಅಷ್ಟೆ. ಆದರಿಂದ ಏನಾಗುತ್ತದೆ ಹೇಳಿ. ಮೆಜಾರಿಟಿಯಲ್ಲಿ ಅದು ಪಾಸಾಗಿರುವಾಗ ನಾವು ಫೈನಲ್ ನೋಟಿಫಿಕೇಷನ್ ಅನ್ನು ಇಷ್ಯೂ ಮಾಡಬೇಕಾಗುತ್ತದೆ. ಅದನ್ನು ನಾವು ಗಮನದಲ್ಲಿಡಬೇಕು. As a Labour Minister I have to look to the interest of the labourers. It is a fact. I agree to it. But, at the same time the Government has to see that the industry survives. If there is no industry where is the question of labourers.

ಇನ್ನೊಂದು ವಿಚಾರ ಏನೆಂದರೆ ಈ ಬೀಡಿ ಉದ್ಯಮದಲ್ಲಿ ೮೧೦ ಪೈಸೆಗೆ ಒಂದು ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಿನಂತರ ೭೪೦ ಪೈಸೆಗೆ ಇಳಿಸಿದರಲ್ಲಾ ಇದರಲ್ಲಿ ಏನಾದರೂ ಹ್ಯಾಂಡ್ಲಿಂಗ್ ನಡೆದಿದೆಯೇ ಏನು ಅನ್ನುವುದು ತಮ್ಮ ಕಲ್ಪನೆ ಇದೆ. ಅದಕ್ಕೆ ನಾನು ಈಪ್ರೊತ್ತು ತಮ್ಮ ಮುಂದೆ ಛಾಲೆಂಜ್ ಮಾಡುತ್ತೇನೆ ಯಾರಿಂದಲಾದರೂ ನಾನು ದುಡ್ಡನ್ನು ವಸೂಲ್ಮಾಡಿದ್ದರೆ ಪುರಾವೆ ಸಹಿತ ಸಭೆಯ ಮುಂದೆ ಹಾಜರುಪಡಿಸಿ ಸುಮ್ಮನೆ ಹುರಳಿಲ್ಲದ alligation ಮಾಡಬಾರದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಆಗಲಿ. ನಾನು ಮಂತ್ರಿಗಳು ಹೇಳಿದ ಛಾಲೆಂಜನ್ನು ಆಕ್ಸೆಪ್ಟ್ ಮಾಡಿಕೊಳ್ಳುತ್ತೇನೆ. ತಾವು ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿ. ಪುರಾವೆ ಸಹಿತ ಎಲ್ಲವನ್ನೂ ರುಜುವಾತು ಮಾಡುತ್ತೇನೆ. ಇಲ್ಲದೇ ಸದನದ ಒಂದು ಸಮಿತಿ ನೇಮಿಸಿ, ಅದಕ್ಕೆ ಕೊಡುತ್ತೇವೆ. ಮಂತ್ರಿಗಳು ಏನು ಹೇಳಿದರೋ ಆ ಬಗ್ಗೆ ನಾನೂ ಸಹ ಛಾಲೆಂಜ್ ಕೊಡುತ್ತೇನೆ.

SRI A.B. JAKANUR.—Oral submission, oral talking has no value.

ಶ್ರೀ ಎಸ್.ಆರ್.ಬೊಮ್ಮಾಯಿ.—ಅದಕ್ಕೇನೇ ಸದನದ ಒಂದು ಸಮಿತಿ ನೇಮಿಸಿ, ಅದರ ಮುಂದೆ ಎವಿಡೆನ್ಸ್ ಕೊಡುತ್ತೇನೆ. Then it becomes the property of the House. Then question of inquiry comes.

SRI A. B. JAKANUR.—Nobody can make base less allegation against anybody.

ಶ್ರೀ ಎಸ್.ಆರ್ ಬೊಮ್ಮಾಯಿ.—ನಿಮ್ಮ ಮೇಲೆ ಅಲಿಗೇಷನ್ಸ್ ಇದೆ. ನಾವು ಹೇಳುತ್ತೇವೆ, ನೀವು ಇಲ್ಲ ಅನ್ನುವುದಾದರೆ ಎನ್‌ಕ್ವೈರಿ ಮಾಡುವುದಕ್ಕೆ ಒಪ್ಪಿಕೊಳ್ಳಿ. ಕಳ್ಳನೋ ನಿಜವೋ ಗೊತ್ತಾಗುತ್ತದೆ.

ಶ್ರೀ ಎ.ಬಿ. ಜಕನೂರ್.—ತಾವು ಇದನ್ನು ಗಮನದಲ್ಲಿಡಬೇಕು. ಇವರಿಗೆ ಕನಿಷ್ಟವೇತನ ೮೧೦ ಪೈಸೆ ಇದ್ದುದನ್ನು ೭೪೦ ಪೈಸೆಗೆ ಇಳಿಸಿದ್ದುದರ ಬಗ್ಗೆ ತಮಗೆ ಸಂಶಯ ಬಂದಿದೆ. ಇದರಲ್ಲಿ ಏನಾದರೂ ಇರಬಹುದು ಅನ್ನುವ ಸಂಶಯ ಇದೆ. ಅದಕ್ಕೆ ತಮಗೆ ಹೇಳುತ್ತೇನೆ. ಇದರಲ್ಲಿ ಏನೂ ನಡೆದಿಲ್ಲ. ನಾವು ಏತಕ್ಕೆ ಹಾಗೆ ಮಾಡಿದೆವು ಎಂದರೆ ರಾಜ್ಯ ರಾಜ್ಯಗಳಲ್ಲಿ ಭಾರಿ ಅಂತರ ಇರುವುದರಿಂದ ಅದನ್ನು ಒಂದು ಏಕರೂಪತೆಗೆ ಎತ್ತಿ ವಯ್ಯಬೇಕು ಅನ್ನುವ ದೃಷ್ಟಿಯಿಂದ ಈ ಬಗ್ಗೆ ಸ್ಟೇಟ್ ಆಡ್ವೈಸರಿ ಬೋರ್ಡ್

ಮೀಟಿಂಗ್ ಕರೆದು ಚರ್ಚಿಸಿದೆವು. ಆದಾದ ೮–೧೦ ದಿವಸದಲ್ಲಿ ಅಂದರೆ ೧೧–೯–೧೯೮೧ರಲ್ಲಿ ಕೇಂದ್ರ ಸರ್ಕಾರದವರು ಆಯಾಯ ರಾಜ್ಯದಲ್ಲಿ ಬೀಡಿ ಕೈಗಾರಿಕೆಗಳು ಏನು ಇದೆ ಅವು ಹಾಳಾಗದಂತೆ ನೋಡಿಕೊಳ್ಳುವುದು ಹಾಗೂ ಆ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಏನು ಮಾಡಬೇಕೆಂಬುದರ ವಿಷಯವಾಗಿ ಆಯಾಯ ರಾಜ್ಯದ ಕಾರ್ಮಿಕ ಸಚಿವರ ಒಂದು ಸಭೆಯನ್ನು ಡೆಲ್ಲಿಯಲ್ಲಿ ಕೂಡಿಸಿದರು. ಅಪ್ಪರೊಳಗೆ ಕೆಲವು ರಾಜ್ಯಗಳಿಂದ ಈ ವಿಷಯವಾಗಿ ವಿನಂತಿಗಳು ಹೋಗಿತ್ತು. ಈ ಬೀಡಿ ಕೈಗಾರಿಕೆಯಲ್ಲಿರುವ ಕಾರ್ಮಿಕರಿಗೆ ಕೊಡುವ ವೇತನದಲ್ಲಿ ಡಿಸ್ಪ್ಯಾರಿಟಿ ಇದೆ, ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕೂ ವ್ಯತ್ಯಾಸ ಇದೆ ಅನ್ನುವುದು ಅವರಿಗೆ ಗೊತ್ತಾಗಿತ್ತು. ಒಬ್ಬರು ಕಡೆ ೧೦೦೦ ಬೀಡಿ ಕಟ್ಟಿದ್ದರೆ ರೂ. ೩–೫೦ ರಿಂದ ೯–೮೦ ಪೈಸೆವರೆಗೆ ಬೇರೆ ಬೇರೆ ರೀತಿಯಾಗಿ ವೇತನ ಕೊಡುತ್ತಿದ್ದರು. ಒಂದು ಕಡೆ ೮೧೦ ಪೈಸೆನೂ ಇತ್ತು. Beedi industry in likely to migrate to the states where the wages are low ಅಂತ ಹೇಳಿದರು. ಈರೀತಿ ವ್ಯತ್ಯಾಸ ಇದೆ ಎಂದು ಅವರಿಗೆ ಮೊದಲೇ ಒಂದೆರಡು ರಾಜ್ಯದಿಂದ ವಿನಂತಿ ಬಂದಿತು. ಆವಾಗ ನಾವೆಲ್ಲಾ ಕೂತು ಕೊಂಡು ಸಮಾಲೋಚನೆ ಮಾಡಿದೆವು, ವಿಚಾರ ವಿನಿಮಯ ಮಾಡಿದೆವು. ಆವಾಗ ಅವರು ಹೇಳಿದರು ಇನ್ನುಮೇಲೆ ನಾವು ಈ ವೇತನವನ್ನು ರಿವೈಸ್ ಮಾಡುವುದಿಲ್ಲ, ಎಂದು. ಬೇರೆ ಬೇರೆ ರಾಜ್ಯಗಳಲ್ಲಿ ಒಂದೊಂದು ರೀತಿ ಯಾಗಿರುವುದರಿಂದ ಈ ಡಿಸ್‌ಪ್ಯಾರಿಟಿಯನ್ನು ಹೋಗಲಾಡಿಸುವುದಕ್ಕೆ ಏನು ಮಾಡಬೇಕು ಅಂತ ವಿಚಾರ ವಿನಿಮಯ ಪಡೆದು ಈ ಒಂದು ತೀರ್ಮಾನಕ್ಕೆ ಬರಲಾಯಿತು. ಇದು ೧೧–೧೧–೧೯೮೨ ರಿಂದ ಒಂದು ವರ್ಷದ ಮಟ್ಟಿಗೆ ಮಾತ್ರ ನಾವು ವೆಸ್ಟ್ ಬಂಗಾಲದವರನ್ನು ಮತ್ತು ಕೇರಳದವರನ್ನೂ ಇದನ್ನು ರಿವೈಸ್ಡ್ ಮಾಡಬೇಡಿ ಎಂದು. ರಿವೈಸ್ಡ್ ಮಾಡಿ ಕೊಂಡವು ಮತ್ತೆ ಎಲ್ಲಿ ಜಾಸ್ತಿ ವೇತನ ಕೊಡುತ್ತಿದ್ದರೋ ಅವರಿಗೆಲ್ಲಾ ಹೇಳಿದೆವು. And decided to fix between Rs. 7 and Rs. 8 ಎಲ್ಲಿ ಕಡಿಮೆ ಕೊಡುತ್ತಿದ್ದರೋ ಅಲ್ಲಿ ಈ ರೀತಿ ಕೊಡಬೇಕು ಎಂದು ಹೇಳಿದ್ದೇವೆ. ಒಟ್ಟಿನಲ್ಲಿ ಹೇಳುವುದಾದರೆ ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ವ್ಯತ್ಯಾಸ ಇದ್ದರೆ ಅದು ೨೫ ಪೈಸೆಗಿಂತ ಹೆಚ್ಚು ಇರಕೂಡದು ಎಂದು ಹೇಳಿದ್ದೆ. This was the policy decision taken there.

ಶ್ರೀ ಡಿ. ದೇವರಾಜ ಅರಸ್.—ನೀವು ಈಗ ಹೇಳಿದ್ದೆಲ್ಲಾ ಸರಿ. ಒಂದು ಕಡೆಗೂ ಮತ್ತೊಂದು ಕಡೆಗೂ ಡಿಸ್ಪ್ಯಾರಿಟಿ ಇರಬಾರದು ಅಂತ ನೀವು ಏನು ತೀರ್ಮಾನ ತೆಗೆದುಕೊಂಡಿದ್ದೀರೋ ಅದರಂತೆ ರೇಟ್ಸ್ ಕೊಡಿ. ಎಲ್ಲಾ ಮಂತ್ರಿಗಳೂ ಸೇರಿ ಏನು ತೀರ್ಮಾನ ಮಾಡಿದರೋ ಅದರಂತೆ ಜಾಗ್ರತೆ ಜಾರಿಗೆ ಕೊಡಿ.

ಶ್ರೀ ಎ. ಬಿ. ಜಕನೂರ್.—ಆ ಮೀಟಿಂಗ್‌ಗೆ ಮಹಾರಾಷ್ಟ್ರದ ಕಾರ್ಮಿಕ ಸಚಿವರು, ಆಂಧ್ರ ಪ್ರದೇಶದ ಕಾರ್ಮಿಕ ಸಚಿವರು ಬಂದಿದ್ದರು. ನಾನೂ ಹೋಗಿದ್ದೆ. ನಾವೆಲ್ಲಾ ಕೂತುಕೊಂಡು ಈ ಬಗ್ಗೆ ವಿಚಾರ ವಿನಿಮಯ ಮಾಡಿದ್ದೇವೆ. ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ವ್ಯತ್ಯಾಸ ಇರಬಾರದು. ಎಲ್ಲಿ ಕಡಿಮೆ ಇದೆಯೋ ಅಲ್ಲಿ ೭ ರಿಂದ ೮ ರ ತನಕ ಮಾಡಬೇಕು ಅಂತ ಹೇಳಿದ್ದೇವೆ. ಅದರಂತೆ ಅವರು ಫಿಕ್ಸ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಆ ಮೀಟಿಂಗ್ ತಮಿಳ್‌ನಾಡಿನ ಸಚಿವರು ಬಂದಿರಲಿಲ್ಲ. ಅಲ್ಲಿಂದ ಒಬ್ಬರು ಆಫೀಸರು ಬಂದಿದ್ದರು. ಅವರಿಗೆ ಕನ್‌ವಿನ್ಸ್ ಮಾಡಿದೆವು. ಅವರು ಈಗಾಗಲೇ ೭–೮ ಕ್ಕೆ ಇಳಿಸಿದ್ದಾರೆ. ಅವರು ಮೀಟಿಂಗ್‌ನಲ್ಲಿ ಹೇಳಿದರು, ಯಾರು ಈ ವೇರಿಯಬಲ್ ಡಿ.ಎ. ಕೊಡುವುದಕ್ಕಾಗುವುದಿಲ್ಲವೋ ಅಂಥಾವರು ಪ್ರತಿ ವರ್ಷವೂ ರೈಸ್ ಮಾಡಬಹುದು ಎಂದು ಹೇಳಿದರು. ತಮಿಳ್‌ನಾಡಿನಲ್ಲಿ ಮೊದಲು ಈರೀತಿ ಇತ್ತು. For rolling 1000 jadi beedies irrespective of size Rs. 5–50, for rolling 1000 sada beedies Rs. 5.55. ಈಗ ಈರೀತಿ ಇದೆ. For rolling 1000 Jadi beedies Rs. 7–20, for rolling 1000 sada beedies Rs. 7 ಆಂಧ್ರ ಪ್ರದೇಶದವರು ಇದಕ್ಕೆ ೨–೩– ಜೋನ್ಸ್ ಮಾಡಿಕೊಂಡಿದ್ದಾರೆ. ಅಲ್ಲಿ ಈ ರೀತಿ ಇದೆ. BIG JALI BEEDIES. Zone I Rs. 7–30, Zone II Rs. 7, Zone III Rs. 6–70. Medium size jali beedies per thousand Zone I, Zone II Rs. 6–80, Zone III Rs. 6–55., Sada beedies. Zone I Rs. 6.55 Zone II Rs. 6–35, Zone III Rs. 6–25. ಅವರ ಜೊತೆ ಮಾತನಾಡಿದ ನಂತರ ನಾನು ಆಮೇಲೆ ಬಾಂಬೆಗೆ ಹೋದೆ. ಅಲ್ಲಿ ಮಹಾರಾಷ್ಟ್ರದ ಕಾರ್ಮಿಕ ಸಚಿವರ ಜೊತೆ ಮಾತನಾಡಿದೆ.

ಶ್ರೀ ಡಿ. ದೇವರಾಜ ಅರಸ್.—ಕೇರಳದವರಿಗೆ ಹೇಳಿದಿರಾ?

ಶ್ರೀ ಎ.ಬಿ. ಜಕನೂರ್.—ಅವರ ಕೂಡ ಅದನ್ನೂ ಮಾಡಿದೆ. ಅವರು ಹೇಳಿದರು We have requested not to revise ಎಂದು.

೧-೫೦ ಪಿ. ಎಂ.

ಕೇರಳದಲ್ಲಿ ೨.೩೦ ರೂಪಾಯಿಗಳು ಮೊದಲು ಇತ್ತು. ಇದನ್ನು ಯಾವಾಗ ಮಾಡಿದ್ದಾರೆ ಎಂದರೆ ೧೫-೧೨-೧೯೬೯ರಲ್ಲಿ.

ಶ್ರೀ ಡಿ. ದೇವರಾಜ ಅರಸ್ .—ಅದು ನನಗೆ ಗೊತ್ತಿದೆ, ಲೇಟೆಸ್ಟ್ ಏನಿದೆ ಎಂಬುದನ್ನು ಹೇಳಿ.

ಶ್ರೀ ಎ. ಬಿ. ಜಕನೂರ್ .— ೧೯೬೯ ಅದನಂತರ ಅವರು ರಿವೈಸ್ ಮಾಡಲಿಲ್ಲ. ಆದರೆ ಏನು ಮಾಡಿದ್ದಾರೆ. ಎಂದರೆ ವೇರಿಯೇಬಲ್ ಡಿ. ಎ. ಯನ್ನು ಆರ್ಡರ್‌ಮಾಡಿದ್ದಾರೆ. Thereafter they have not revised but according to variable DA. Now It comes to 8-60 to 9-40 according to the cost of living index as on March 1980. under the settlement. ಸೆಟ್ಲ್‌ಮೆಂಟ್ ಆಗಿ ೯-೬೦ ತನಕ ಕೊಟ್ಟಿದ್ದಾರೆ. ಆದನ್ನು ಹಾಗೆಯೇ ಇಟ್ಟು ಕೊಂಡಿದ್ದಾರೆ.

SRI D. DEVARAJ URS .— The effect is the same. Instead of the basic wages being revised, they have gone on the variable DA. wiich will be given depending on the cost of price index. ಅವರು ಪ್ರೈಸ್ ಇಂಡೆಕ್ಸ್ ಮೇಲೆ ಹೋಗುತ್ತಿದ್ದಾರೆ. ಅದು ೯೨೦ ಮತ್ತು ೯೪೦ಕ್ಕೆ ಬರುತ್ತಿದೆ.

ಶ್ರೀ ಎ. ಬಿ. ಜಕನೂರ್ .— 2 Paise for every five points increase in consumer index, ಅದನ್ನು ಮಾಡಿದ್ದಾರೆ. ಆ ಪ್ರಕಾರ ಅವರಿಗೆ ೨೬೦ ಮತ್ತು ೯೪೦ರ ಮಧ್ಯೆ ಬರುತ್ತಾ ಇದೆ. ಮತ್ತು ಸೆಟ್ಲ್‌ಮೆಂಟ್ ಕೂಡ ಆಗಿದೆ.

ಶ್ರೀ ಡಿ. ದೇವರಾಜ್ ಅರಸ್ .— ಅವರ ಪದ್ಧತಿಯನ್ನು ನೀವು ಜಾರಿಗೆ ತರುವುದಾದರೆ it is more helpful to the workers. ಈ ತರಹ ಅಲ್ಲಿ ಆಪ್ಷನ್ ಇದೆ. ನಮಗೆ ಬೈಂಡಿಂಗ್ ಅಲ್ಲ, ನಾವು ಚೇಂಜ್ ಮಾಡುತ್ತೇವೆ. ಈ ಪ್ರಶ್ನೆಗಳು ಬರುವುದಿಲ್ಲ. ನೀವು ೨೫೦ಕ್ಕೆ ಬೇಸಿಕ್ ಇಟ್ಟು ಕೊಳ್ಳಿ. ಅವರಂತೆ ನೀವೂ ಅಡಾಪ್ಟ್ ಮಾಡಿ.

ಶ್ರೀ ಎ. ಬಿ. ಜಕನೂರ್ .— ಇದನ್ನ ಕೆಲವು ರಾಜ್ಯಗಳಲ್ಲಿ ಮಾಡಿದ್ದಾರೆ. ಇನ್ನು ಕೆಲವು ರಾಜ್ಯಗಳಲ್ಲಿ ಮಾಡಿಲ್ಲ.

ಶ್ರೀ ಡಿ. ದೇವರಾಜ ಅರಸ್—ಇದು ಪಕ್ಕದ ರಾಜ್ಯದಲ್ಲಿ ಕಡಿಮೆಯಾಯಿತು. ಅದಕ್ಕೆ ನಾನು ಚೇಂಜ್ ಮಾಡಿದೆ ಎಂದು ಹೇಳಬೇಡಿ. ಹಾಗಾದರೆ ಬೋರ್ಡ್‌ನವರಿಗೆ ಯಾರಿಗೂ ಬುದ್ಧಿ ಇಲ್ಲ ಎಂದು ಹೇಳಿದ ಹಾಗಾಯಿತು. The Board has advised and has taken a majority decision, as you yourself admitted.

SRI A. B. JAKANUR .— Yes.

SRI D. DEVARAJ URS .— Then what is that Board ? It doesn't consist merely non-official MLAs. It consists of your officers including the Labour Secretary and you are also the Chairman of that Board. Under these circumstances, it is advisory. So I can change ಎಂದರೆ ಹೇಗೆ ?

ಶ್ರೀ ಎ. ಬಿ. ಜಕನೂರ್ .— ಏತಕ್ಕೆ ಚೇಂಜ್ ಮಾಡಿದಿರಿ ಎಂದು ಕೇಳಿದಿರಲ್ಲ. ಅದಕ್ಕೆ ನಾನು ಉತ್ತರ ರೂಪವಾಗಿ ಹೇಳುತ್ತಿದ್ದೇನೆ.

ಶ್ರೀ . ಡಿ. ದೇವರಾಜ ಅರಸ್ .— ನೀವು ಹೇಳುವುದೆಲ್ಲಾ ಜೋಡ್ರ್ ಮುಂದೆ ಇರಲಿಲ್ಲವೇ ? ಅಥವಾ ಆಕಸ್ಮಾತ್ ಉದ್ಭವವಾಯಿತೇ ? ನೀವು ಹೇಳತಕ್ಕಂಥ ಜೋನ್ ಟು ಜೋನ್‌ಗೆ ಇರುವ ವ್ಯತ್ಯಾಸವಾಗಲೀ ಮತ್ತೊಂದು ಆಗಲೀ ಹಿಂದೆ ಏನಿತ್ತು ಎಂಬುದನ್ನು ನೋಡಿ. ಇಡೀ ಇಂಡಿಯಾ ದೇಶದಲ್ಲಿ ಬೀಡಿ ವರ್ಕರ್ಸ್‌ಗೆ ಬಗ್ಗೆ ಬಿಲ್ ತಂದು ಪಾಸ್ ಮಾಡಿದವರು ನಾವು. The whole of India adopted us afterwards. ಈ ಹಿನ್ನೆಲೆ ನಿಮಗೆ ಗೊತ್ತಿಲ್ಲ. ದಯಮಾಡಿ ಇದನ್ನು ನೀವು ತಿಳಿದುಕೊಳ್ಳಿ. ನಾವು ಮಾಡಿದ್ದನ್ನು ಯಾರೂ ಮಾಡಿರಲಿಲ್ಲ. When I was the Labour Minister it is Karnataka Government which brought the Beedi workers Bill for the first time and passed it. It became a model for the whole country.

ಶ್ರೀ ಎ. ಬಿ. ಜಕನೂರ್ .— ಆಯಿತು. ಈಗ ಇದೆಲ್ಲವನ್ನೂ ನಾವು ವಿಚಾರವಿನಿಮಯ ಮಾಡಿ ಮಾಡಿದ್ದೇವೆ. ತಮಿಳುನಾಡಿನಲ್ಲಿ ೭.೨೦ ಆಂಧ್ರಪ್ರದೇಶದಲ್ಲಿ ೭.೩೦ ಇದೆ. ನಾವು ೭.೪೦ ಮಾಡಿದ್ದೇವೆ. ಅಂದರೆ ನಾವು ಅಲ್ಲಿಗಿಂತ ಹೆಚ್ಚು ಇಟ್ಟಿದ್ದೇವೆ. ಮಹಾರಾಷ್ಟ್ರದಲ್ಲಿ ೭.೪೦ ಇಥವಾ ೭.೫೦ ಮಾಡುತ್ತೇವೆ ಎಂದು ಹೇಳಿದ್ದಾರೆ. ಅವರು ಏಷ್ಟು ಮಾಡಿರುತ್ತಾರೆಯೋ ನನಗೆ ಗೊತ್ತಿಲ್ಲ. ಆದರೆ ನಾವು ಏತಕ್ಕೆ ಈ ರೀತಿ ನಿರ್ಣಯ ಮಾಡಿದೆವು ಎಂದರೆ there are some grounds why we took that decision. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಬೀಡಿ ಉದ್ದಿಮೆ ಎರಡನೆಯ ರಾಜ್ಯಕ್ಕೆ ಹೋಗಬಾರದು ಎನ್ನತಕ್ಕಂಥ ಉದ್ದೇಶ ಇದೆ. ಏತಕ್ಕೆಂದರೆ ಅಪರಲ್ಲಿ ಫ್ಯಾಕ್ಟರಿಗಳು ಇರುವುದಿಲ್ಲ. ಮಿಷಿನರಿ ಇರುವುದಿಲ್ಲ. ಅಲ್ಲದೇ ದೊಡ್ಡ ದೊಡ್ಡ ಬಿಲ್ಡಿಂಗ್ ಕೂಡ ಇರುವುದಿಲ್ಲ. ಯಾರ ಕಡೆಯಿಂದ ಲಾದರೂ ಅವರು ಟೊಬೆಕೋವನ್ನು ತರಿಸಿ ಅದನ್ನು ಉಪಯೋಗಿಸಿಕೊಂಡು ಬೀಡಿ ಕಟ್ಟಿಸಿ ಅವರು ಮಾರುತ್ತಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ ಮತ್ತು ನಾವು ಈ ವೇಜಸ್ಸ್‌ನ್ನು ಹೆಚ್ಚು ಮಾಡಿದ್ದರಿಂದ ಕೇಂದ್ರದವರು ಒಂದು ಡಿಸಿಷನ್ ತೆಗೆದುಕೊಂಡು ಅದು ೨೦ ಪೈಸೆಗಿಂತ ಹೆಚ್ಚು ಇರಬಾರದು ಎಂದು ಹೇಳಿದ್ದಾರೆ ಮತ್ತೆ ಕೆಲವರಿಗೆ ಮಧ್ಯಪ್ರದೇಶದಿಂದ ಲೀವ್ಸ್ ಬರುತ್ತಿದೆ, ಗುಜರಾತ್‌ನಿಂದ ತಂಬಾಕು ಬರುತ್ತಿಲ್ಲ, ಅಲ್ಲಿ ಬೀಡಿ ಕಟ್ಟುವುದಕ್ಕೆ ಹೊರು ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ೫ ಲಕ್ಷ ಜನ ಕಾರ್ಮಿಕರು ಏನಿದ್ದಾರೆ ಅವರು ನಿರ್ಗತಿಕರಾಗುವ ಸಂಭವ ಇದೆ. ಇದು ಆಗಬಾರದು ಎಂದು ಹೇಳಿ ಇದನ್ನು ೭.೪೦ಕ್ಕೆ ಫಿಕ್ಸ್ ಮಾಡಿದ್ದೇವೆ. ಇದರಿಂದ ಈ ಕಾರ್ಮಿಕರೆಲ್ಲಾ ಬಹಳ ಸಂತೋಷಪಟ್ಟಿದ್ದಾರೆ. This is majority rule. This is democracy, I tell you. ಎಲ್ಲಾ ಜನ ಹ್ಯಾಪಿಯಾಗಿ ಇದ್ದಾರೆ. ಕೆಲವು ಜನರಿಗೆ ಇದು ಆಗುವುದಿಲ್ಲ, ಯಾರಿಗೆ ಆಗುವುದಿಲ್ಲ ಅವರು ಏನಾದರೂ ಆಲಿಗೇಷನ್ಸ್ ಹೇಳುತ್ತಾ ಇರುತ್ತಾರೆ. That is not the case. ಶ್ರೀಮಾನ್ ಕಕ್ಕಿಲ್ಲಾಯರವರು ಹೇಳಿದರು, ೧೬ ನೋಟಿಫಿಕೇಷನ್ಸ್ ಅನ್ನು ಗೋಡ್ರ್ ಕನ್ಸಿಡರ್ ಮಾಡಿದೆ ಎಂದು, ಅದು ೧೬ರ ಅಲ್ಲ ೨೬ ನೋಟಿಫಿಕೇಷನ್ಸ್ ಕನ್ಸಿಡರ್ ಮಾಡಿ ಆಬ್ಜೆಕ್ಷನ್ಸ್ ಕೊಟ್ಟಿದೆ ಅದನ್ನೆಲ್ಲಾ ನಾವು ಒಂದೊಂದಾಗಿ decide ಮಾಡುತ್ತಿದ್ದೇವೆ. ಈಗಾಗಲೇ ಪ್ಲಾನ್‌ಟೇಷನ್ ಲೇಬರರ್ಸ್ ಮತ್ತು "ಕಾಫಿ, ಟೀ ಲೇಬರರ್ಸ್‌ಗೂ ನಾವು final notification ಮಾಡಿದ್ದೇವೆ. ಇನ್ನು ಕೆಲವೆ ಬರುತ್ತಾ ಇವೆ ಆದರೆ ಇದರಲ್ಲಿ ತಡ ಏತಕ್ಕೆ ಆಯಿತು ಎನ್ನುವ ಪ್ರಶ್ನೆ ಇದೆ. ೧-೧-೮೧ ರಿಂದ ಮಾಡಿದರೂ ಕೂಡ ಈ ವರೆಗೆ ಡಿಲೇ ಏತಕ್ಕೆ ಆಯಿತು ಎಂದು ಪ್ರಶ್ನೆ ಕೇಳಿದ್ದಾರೆ. ಯಾರಿಗಾದರೂ ಪೈಟ್ ಮಾಡುತ್ತಿದ್ದರೋ ಏನೋ ಎಂದು ಹೇಳಿದರು. ಆದರೆ ನಾವು ಯಾರಿಗೂ ಪೈಟ್ ಮಾಡುವುದಿಲ್ಲ. ತಡ ಏತಕ್ಕೆ ಆಯಿತು ಎಂದರೆ.....

SRI S. R. BOMMAI .— You are doing by instalments.

ಶ್ರೀ ಎ. ಬಿ. ಜಕನೂರು .— ಮಾನ್ಯ ಸದಸ್ಯರು ಸ್ವಲ್ಪ ತಾಳು ಹೇಳುವುದನ್ನು ಕೇಳಬೇಕು. ಒಂದೆರಡು ಫೈಲ್ ಇದ್ದಿದ್ದರೆ ಹಾಗೆ ಮಾಡುವುದಕ್ಕೆ ಬರುತ್ತಿತ್ತು. ಆದರೆ ಈ ವಿಚಾರದಲ್ಲಿ ೨೬ ಫೈಲ್‌ಗಳು ಇದೆ. ಮೊದಲು ಒಂದು ಮೀಟಿಂಗ್ ಕರೆದರು. ಬೋರ್ಡ್‌ನಲ್ಲಿ ಒಂದು ರೆಸೊಲ್ಯೂಷನ್ ಹೇಗೆ ಬರೆದರು ಎಂದರೆ ೨೬ ಇಂಡಸ್ಟ್ರೀಸ್‌ಗಳ ಬಗ್ಗೆ ಎಲ್ಲವನ್ನು ಕನ್ಸಿಡರ್ ಮಾಡಿ ಬಹುಮತದಿಂದ ತೀರ್ಮಾನಿಸಲಾಯಿತು ಎಂದು ಬರೆದು ಇಟ್ಟಿದ್ದಾರೆ. ಹಾಗೆ ೨೬ ಡಿಸಿಷನ್ಸ್ ತೆಗೆದುಕೊಂಡಿದ್ದಾರೆ. ಆದರ ಕಾಫಿಇಟ್ಟುಕೊಂಡು ರಿಪೈಸ್‌ಮಾಡಿದರೆ, You agree with me that it won't stand

in the Court.. ಅದು ೧೫–೨೦ ದಿವಸದ ನಂತರ ನನ್ನಲ್ಲಿಗೆ ಬಂತು. ನಾನು, ' ಅದು ಸರಿಯಿಲ್ಲ, ಪ್ರತಿಯೊಂದು ಇಂಡಿಸ್ಟ್ರೀಸನ್ನು ನೀವು ತೆಗೆದುಕೊಳ್ಳಬೇಕು. ಹಾಗೆ ಪ್ರತಿಯೊಂದನ್ನೂ ವಿಚಾರ ಮಾಡಿ ತೀರ್ಮಾನಿಸಲಾಯಿತು ಎಂದು ತರಾಪ ಬರೆಯಲು ತಿಳಿಸಿದೆ. ಆ ಪ್ರಕಾರ. Thereafter they wrote the resolution. ಅದಕ್ಕೆ ಒಂದು ತಿಂಗಳು ಹಿಡಿಯಿತು. ಫೈಲ್‌ಗಳೆಲ್ಲಾ ಈಗ ಬರುತ್ತಾ ಇವೆ. ಅವು ಬಂದ ಬಂದಹಾಗೆ ಈಗ ಕ್ಲಿಯರ್ ಮಾಡುತ್ತಿದ್ದೇವೆ. ಇದನ್ನು ಗಡಿಬಿಡಿಯಿಂದ ಮಾಡಿಬಡಿ ಎಂದು ಕೆಲವರು ಹೇಳುತ್ತಿದ್ದಾರೆ. ಇದನ್ನು ಗಡಿಬಿಡಿಯಿಂದ ಮಾಡಿಬಿಟ್ಟರೆ ಹೈಕೋರ್ಟ್‌ಗೆ ಹೋಗುತ್ತೆವೆ ಆಲ್ಲಿ ಸ್ಟೇ ಸಿಕ್ಕಿಬಿಡುತ್ತದೆ.ಆದರಅರ್ಥ ಏನಾಯಿತು? ಹಾಗೆ ನಾವು ಮಾಡುವುದಿಲ್ಲ. ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ, before the end of this month we will try to finish everything. We won't delay.

SRI K. RAMABHAT .— Sir,.....

MR. DEPUTY SPEAKER .— You have not given notice,

ಶ್ರೀ ಜೆ ಹೆಚ್. ಪಟೇಲ್.— ಮಾನ್ಯ ಅಧ್ಯಕ್ಷರೇ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಕಡೆಯ ನನ್ನ ಮಾನ್ಯ ಸ್ನೇಹಿತರುಗಳು ಮಾನ್ಯ ಮಂತ್ರಿಯವರ ವಿರುದ್ಧ ಸಕಾರಣ ವಾಗಿಯೋ ಅಥವಾ ವಿನಾಕಾರಣವಾಗಿಯೋ ನಿರ್ದಿಷ್ಟವಾದ ಆಪಾದನೆಗಳನ್ನು ಮಾಡಿದ್ದಾರೆ. Under Rule 288 a member while speaking shall not make a personal charge against a member. ಮಾನ್ಯ ರಾಮಭಟ್‌ರವರು,ಮಾನ್ಯ ದೇವರಾಜ ಅರಸ್‌ರವರು, ಮಾನ್ಯ ಕಕ್ಕಿಲಾಯರವರು ಮತ್ತು ಮಾನ್ಯ ಬೊಮ್ಮಾಯಿಯವರು ಅವರ ಮೇಲೆ ಆಪಾದನೆಯನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಯವರು ಹಣ ತೆಗೆದುಕೊಂಡಿದ್ದಾರೆ ಎಂದು ಅವರು ಆಪಾದನೆ ಮಾಡಿದ್ದಾರೆ. ಈ ಬಗ್ಗೆ ಎನ್‌ಕ್ವೈರಿ ಮಾಡುವುದಕ್ಕೆ ಒಂದು ಕಮಿಟಿ ರಚನೆ ಆಗಲೇಬೇಕು. ಅವರೆಲ್ಲಾ ಹೇಳಿದ ಮೇಲೆ ಇದನ್ನು ಹಾಗೆಯೇ ಬಿಟ್ಟುಬಿಡುವುದಕ್ಕೆ ಆಗುತ್ತದೆಯೇ ? ಆದ್ದರಿಂದ ತಾವು ಈ ಸದನದ ಒಂದು ಸಮಿತಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಲೇಬೇಕು ಮತ್ತು ಮಾನ್ಯ ಮಂತ್ರಿಯವರು ಹಣ ತೆಗೆದುಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದು ಪತ್ತೆ ಆಗಲೇಬೇಕು. ಇವರು ಹೇಳಿದ್ದರಲ್ಲಿ ಏನಾದರೂ ತಪ್ಪು ಇದ್ದರೆ ಇವರಿಗೆ ಶಿಕ್ಷೆ ಆಗಲಿ ಅಥವಾ ಅವರದ್ದು ಏನಾದರೂ ತಪ್ಪು ಇದ್ದರೆ ಅವರಿಗೆ ಶಿಕ್ಷೆ ಯಾಗಲಿ. ಅವರು ಹೇಳಿದ್ದು ಸರಿ ಎಂದಾದರೆ ಅವರು ಇವರ ಮೇಲೆ ಪ್ರಿವಿಲೇಜ್ ಮೊಷನ್ ತರಲಿ. ನನ್ನ ಮಾತಿಗೆ ತಾವು ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ತಾವು ಈ ಬಗ್ಗೆ ರೂಲಿಂಗ್ ಕೊಡಬೇಕು.

ಶ್ರೀ ಎ. ಬಿ. ಜಕನೂರ್ .— ಸ್ವಾಮಿ, ಇದರಲ್ಲಿ ಯಾರೂ ಸಂಕೋಚ ಪಡುವ ಕಾರಣವಿಲ್ಲ. ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ಈ ಕಾರ್ಮಿಕರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂತ ಹೆಚ್ಚು ಕಳಕಳಿ ಸರ್ಕಾರಕ್ಕೆ ಇದೆ. ಸರ್ಕಾರಕ್ಕೆ ಈ ಕಾರ್ಮಿಕರ ಬಗ್ಗೆ ಕಳಕಳಿ ಇಲ್ಲ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಈ ವಿಚಾರದಲ್ಲಿ ಎಲ್ಲಾ ಬೋರ್ಡ್ ಡಿಸಿಷನ್ಸ್ ಬಗ್ಗೆ ಮತ್ತು ಆಬ್ಜೆಕ್ಷನ್ಸ್ ಬಗ್ಗೆ ನಾವು ವಿಚಾರ ಮಾಡುತ್ತೇವೆ ಈ ಸಮಯದಲ್ಲಿ ಇದು ಮಾನ್ಯ ಲಕ್ಷ್ಮೀಸಾಗರ್‌ರವರಿಗೂ ಗೊತ್ತಿದೆ. We have to see the High Court decision and then decide as per Law. ಈ ಪಿ. ಡಬ್ಲ್ಯೂ. ಡಿ. ವಿಚಾರದಲ್ಲಿ ಮಾನ್ಯ ಸದಸ್ಯರೊಬ್ಬರು what is the rate ? ಎಂದು ಕೇಳಿದರು. ಈ ಕಾಸ್ಟ್ ಆಫ್ ಪ್ರೈಸ್ ಇಂಡೆಕ್ಸ್ ಮೊದಲು ಎಷ್ಟು ಇತ್ತು, ಈಗ ಎಷ್ಟು ಆಗಿದೆ.— ಇದೆಲ್ಲವನೂ ನೋಡಿಕೊಂಡು ನಾವು ಸರಿಯಾಗಿ ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ದಯವಿಟ್ಟು .....

ಶ್ರೀ ಕೆ. ರಾಮಭಟ್ .— ಮಾನ್ಯ ಅರ್ಥಮಂತ್ರಿಯವರು ಈ ಕಾಫಿ ಪ್ಲಾಂಟೇಷನ್ ಲೇಬರ್ಸ್ ಡಿ. ಎ. ವಿಚಾರದಲ್ಲಿ ಹೇಳಿದ್ದಾರಲ್ಲ ಅದು ಏನು ಎಂಬುದನ್ನು ಹೇಳಿ.

ಶ್ರೀ ಎ. ಬಿ. ಜಕನೂರು.—ಈ ಕಾಫಿ ಪ್ಲಾಂಟೇಷನ್ ಲೇಬರ್ಸ್‌ಗೆ we have added 2 DA. ಈ ಬೀಡಿ ವರ್ಕರ್ಸ್‌ಗೂ ನಾವು ಪ್ರತಿ ವರ್ಷ revise ಮಾಡುವವರಿದ್ದೇವೆ. It is only upto December 1982. ಇದನ್ನು ಮತ್ತೆ ೪ ತಿಂಗಳಲ್ಲಿ ರಿವೈಸ್ ಮಾಡಬೇಕಾಗುತ್ತದೆ. ಮಹಾರಾಷ್ಟ್ರ ದಲ್ಲಿ ಮತ್ತು ಆಂಧ್ರ ಪ್ರದೇಶದಲ್ಲಿ ಪ್ರತಿ ವರ್ಷ ರಿವೈಸ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಎಲ್ಲಾ ಕೇಸುಗಳನ್ನು ಎಲ್ಲಾ ಬೇಡಿಕೆಗಳನ್ನು ಈ ತಿಂಗಳ ಕೊನೆಯ ವೇಳೆಗೆ ತೀರ್ಮಾನ ಮಾಡಲು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎ. ಬಿ. ಜಕನೂರು :— ಸಾಧ್ಯವಾದಷ್ಟು ಮಟ್ಟಿಗೆ ಎಲ್ಲಾ ಕೇಸುಗಳನ್ನು ತೀರ್ಮಾನ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

MR DEPUTY SPEAKER .— The house will now adjourn and meet again at 3-30 P.M.

The House Adjourned at Five Minutes past two of the Clock to meet again at Thirty Minutes past Three of the Clock.

3-45 P. M.

The House re-assembled at Forty five Minutes Past Three of the Clock.

(MR. DEPUTY SPEKER (SRI BAPURAO HULSOORKAR) In the Chair)

SRI AZIZ SAIT.— Sir, I had sent a notice under Rule 312. But my name is not there in the agenda.

MR. DEPUTY SPEAKER.—That is over.

SRI AZIZ SAIT.—But my name is not there.

MR. DEPUTY SPEAKER.—That was added subsequently.

SRI AZIZ SAIT.—My name was not there in the Agenda. So I must be given a chance to speak.

MR. DEPUTY SPEAKER.— You were not present at the time of the discussion. That matter is closed.

SRI AZIZ SAIT: — How can I know if my name was added subsequently ?

MR. DEPUTY SPEAKER.— You were not present. The matter is over now. Hon. Member Sri S. S. Arakeri.....

SRI AZIZ SAIT .— Let there be justice. My name may have been with you. But this is the agenda given by your office.

MR. DEPUTY SPEAKER .— But you were not there. The matter is closed. Otherwise I would have given you a chance. I will issue instructions to my office.

SRI AZIZ SAIT — Sir you must allow me at least two minutes.

ಉಪಾಧ್ಯಕ್ಷರು .— ಮೂವ ರೂಲ್ಸ್ ಪರ್ಮಿಟ್ ಮಾಡುತ್ತದೆ ?

ಶ್ರೀ ಅಜೀಜ್ ಸೇಠ್ .— ಸರ್ಕಾರ ಹೇಗೆ ಕೆಲಸ ಮಾಡುತ್ತದೋ ಹಾಗೆಯೇ ನಾನು ಮೂಷ ನಾಡುತ್ತೇನೆ.